ಯೇಸುವಿನ ಈ ನಿತ್ಯತೆಯು, **ಜಗದುತ್ಪತ್ತಿಗಿಂತ ಮೊದಲೇ ತಿಳಿದಿದ್ದು, ಅಂತ್ಯಕಾಲದಲ್ಲಿ ನಿಮಗಾಗಿ ಪ್ರತ್ಯಕ್ಷಮಾಡಿದನು.** ಇದರ ಬೆಳಕಿನಲ್ಲಿ, ಆ ವಿಶ್ವಾಸಿಗಳು ತಾವು ಸಹಿಸಿದ ಕಷ್ಟಗಳ ಕುರಿತು ಅರಿತುಕೊಳ್ಳುವರು. ಕಷ್ಟಗಳು ದೇವರು ನಮ್ಮನ್ನು ಮರೆತುಬಿಟ್ಟಿದ್ದಾನೆ ಎಂಬುದರ ಸೂಚನೆಯು ಅಲ್ಲ. ದೇವರು ತನ್ನನ್ನು ಜನರಿಗೋಸ್ಕರ ಆರಿಸಿಕೊಳ್ಳುವ ನಿತ್ಯದ ರೂಪವನ್ನು ಅವರು ಹಂಚಿಕೊಂಡರು. ಯೇಸುವಿನ ಬರುವಿಕೆಯು "ನಿನಗೋಸ್ಕರ" ಇರುವದಾಗಿದೆ. ಅಂತ್ಯದ ಸಮಯ ಇದು ಕ್ರೈಸ್ತರು ಇರುವಂಥದ್ದು ಆಗಿದೆ. ಕ್ರಿಸ್ತನ ಅವತರಿಸುವಿಕೆಯೊಡನೆ, ದೇವರು ನಿರ್ಣಾಯಕವಾಗಿ ಕಾರ್ಯಮಾಡಿದನು. ಮಾನವನ ವಿಮೋಚನೆಗೆ ಸಂಬಂಧಿಸಿದಂತೆ ದೇವರಿಗೆ, ಹಾಳುಮಾಡದಿರುವಗನ್ನು ಉಳಿಸುವಂಥ ಯೋಜನೆಯು ಇಲ್ಲ. ಪೇತ್ರನು ಮತ್ತು ಆತನ ಓದುಗರು ಅಂತ್ಯಕಾಲದಲ್ಲಿ ಜೀವಿಸುತ್ತಿದ್ದರು, ಮತ್ತು ಇಪ್ಪತ್ತೊಂದನೆಯ ಶತಮಾನದ ಜೀವಿಸುತ್ತಿರುವ ಕ್ರೈಸ್ತರು ಅಂತ್ಯಕಾಲದಲ್ಲಿ ಜೀವಿಸುತ್ತಿದ್ದಾರೆ ಮತ್ತು ಮಾನವ ಜೀವಿಯು ಈ ಗ್ರಹದಲ್ಲಿ ಜೀವಿಸುವವರೆಗೆ ಅದು ಅಂತ್ಯಕಾಲದಲ್ಲಿ ಜೀವಿಸುವದು ಆಗಿದೆ.

ಇದು ಕಡೆಯ ಸಮಯವಾದ ಕಾರಣ, ವಿಶ್ವಾಸಿಗಳು ಇದನ್ನು ಯಾವುದೇ ಸಮಯದಲ್ಲಿ ಕರ್ತನ ಮರಳುವಿಕೆಗಾಗಿ, ನ್ಯಾಯತೀರ್ಪಿಗಾಗಿ ಮತ್ತು ನಿತ್ಯತ್ವಕ್ಕಾಗಿ, ಮತ್ತು ಯಾವುದೇ ಕ್ಷಣದಲ್ಲಿ ಬೇಧಿಸಬಹುದಾದ ನಿತ್ಯತ್ವವನ್ನು ಕಾಯುವವರಾಗಿದ್ದಾರೆ. "ಅಂತ್ಯದ ಸಮಯದಲ್ಲಿನ" ಕಠಿಣತೆಯನ್ನು ಪೌಲನು ಬರೆಯುವಾಗ (2 ತಿಮೋಥೆ 3:1), ಆತನು ತನ್ನ ಸ್ವಂತದ ದಿನಗಳ ಬಗೆಗೆ ಬರೆಯುತ್ತಿದ್ದನು. ಇಬ್ರಿಯದ ಲೇಖಕನು "ಈ ಕಡೆಯ ದಿನಗಳಲ್ಲಿ" ದೇವರು ತನ್ನ ಮಗನೊಡನೆ ಮಾತನಾಡಿದನು ಎಂದು ಖಂಡಿತವಾಗಿ ಹೇಳುವಾಗ (ಇಬ್ರಿಯ 1:2), ಆತನು ತಾನು ಜೀವಿಸಿದ್ದ ದಿನಗಳ ಬಗೆಗೆ ಬರೆಯುತ್ತಿದ್ದಾನೆ. ಹಳೆಯ ಒಡಂಬಡಿಕೆಯಲ್ಲಿನ ಘಟನೆಗಳ ಬಗೆಗೆ ಪೌಲನು ಹೇಳುವಾಗ, "ಈ ಸಂಗತಿಗಳು ನಿದರ್ಶನರೂಪವಾಗಿದೆ; ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ" ಎಂದಿದ್ದಾನೆ (1 ಕೊರಿಂಥ 10:11). ನಕರಾತ್ಮಕವಾಗಿ ಹೇಳಲ್ಪಡುವಂತೆ, ಹೊಸ ಒಡಂಬಡಿಕೆಯಲ್ಲಿನ ಅಪೊಸ್ತಲಿಕ ಸಮಯದಲ್ಲಿ ಕರ್ತನು ಬರುವದಕ್ಕಿಂತ ಮುಂಚೆ ಸೂಚಿಸಲ್ಪಟ್ಟಂಥ "ಕಡೆಯ ಸಮಯಗಳು" ಅಥವಾ "ಕಡೆಯ ದಿನಗಳು" ಇವನ್ನು ನಾವು ಅರ್ಥಮಾಡಿಕೊಳ್ಳಲಾರೆವು. ಸಹಸ್ರಾರು ರಾಜ್ಯಗಳ, ಸಂಭ್ರಮ, ಇತರ ಅಂಥ ಅವಿಷ್ಕಾರಗಳ ಸೂಚನೆಯು ಅಲ್ಲಿಲ್ಲ. ಕ್ರೈಸ್ತರು ಅಂತ್ಯದ ದಿನಗಳಲ್ಲಿ ಜೀವಿಸುತ್ತಿದ್ದಾರೆ, ಮತ್ತು ಕಡೆಯ ದಿನಗಳು ಪರಿಪೂರ್ಣವಾದಾಗ, ದೇವರ ಚಿತ್ತದಂತೆ, ಕರ್ತನು ಮರಳುತ್ತಾನೆ. ನ್ಯಾಯತೀರ್ಪು ಮತ್ತು ನಿತ್ಯತ್ವವೂ ಹಿಂಬಾಲಿಸುವದಾಗಿದೆ.

**ವಚನ 21.** "ನಿಮಗೋಸ್ಕರ" ಯೇಸು ಪ್ರಕಟಿಸಿಕೊಂಡನು, ಎಂದು ಪೇತ್ರನು ವಚನ 20ರಲ್ಲಿ ಹೇಳಿದ್ದಾನೆ. ಇಲ್ಲಿ ಸ್ಪಷ್ಟತೆಯ ಅವಶ್ಯಕತೆಯು ಇದೆ. ಯಾರಿಗೋಸ್ಕರ ಯೇಸು ಪ್ರಕಟವಾದನು? **ದೇವರಲ್ಲಿ ನೀವು ಆತನ ಮೂಲಕ ನಂಬಿಕೆಯಿಟ್ಟವರಾದ ಅವರ ಮೂಲಕವೇ** ಎಂದು ಅಪೊಸ್ತಲನು ಹೇಳುತ್ತಾನೆ. ದೇವರು ಒದಗಿಸಿದ ರಕ್ಷಣೆಯು ವೈಯಕ್ತಿಕವಾದದ್ದಾಗಿದೆ. ದೇವರು ಯೇಸು ಕ್ರಿಸ್ತನ ಮೂಲಕ ಜನರಿಗೋಸ್ಕರ ಬೇರ್ಪಡಿಸಲು

ಬರಲಿಲ್ಲ ಆದರೆ "ನೀವು ... ವಿಶ್ವಾಸಿಗಳಾಗಿರುವದರಿಂದ," ಪೇತ್ರನ ಮಾತುಗಳನ್ನು ಓದುವಂಥ ವಿಶ್ವಾಸಿಗಳಿಗೆ. "ವಿಶ್ವಾಸಿಗಳಿಗೆ" ಎಂದು ಭಾಷಾಂತರಿಸುವಾಗ NASBಯು ಗ್ರೀಕ್‌ಗೆ ನಂಬಿಗಸ್ತವಾಗಿರುತ್ತದೆ, ಆದರೆ ನಂಬಿಕೆಯು ವಿಶ್ವಾಸವನ್ನು ತಲುಪುವ ರೀತಿಯಲ್ಲಿ ಯಾವಾಗಲು ಹೊಸ ಒಡಂಬಡಿಕೆಯಲ್ಲಿ ಬಳಸಲ್ಪಡುವದಾಗಿದೆ. REBಯು "ಆತನ ಮೂಲಕ ದೇವರಲ್ಲಿ ವಿಶ್ವಾಸವಿಡುವದಕ್ಕೋಸ್ಕರ ನೀವು ಬಂದಿದ್ದೀರಿ" ಎಂದು ಭಾಷಾಂತರಿಸುವದಾಗಿದೆ. ಅವರು ದೇವರಲ್ಲಿ ನಂಬಿಕೆಯಿಡುವವರಾಗಿದ್ದರು, ಆದರೆ ಅವರು ನಂಬಿಕೆಯಿಡುವದಕ್ಕೆ ಕಾರಣ ಯೇಸು ತಂದೆಯನ್ನು ಪ್ರಕಟಿಸಿದನು, ನಂತರ ಇದು "ಆತನ ಮೂಲಕ" ಆಗಿದ್ದು ಅದು ಏಶಿಯಾದ ಕ್ರೈಸ್ತರು ವಿಶ್ವಾಸಿಗಳು ಆಗಿದ್ದೇ ಆಗಿದೆ. ಈ ಹೇಳಿಕೆ ಮತ್ತು ಯೋಹಾನ 14:1, 6 ಇವುಗಳು ಒಂದೇ ರೀತಿಯ ವಿಚಾರದಿಂದ ಬಂದವುಗಳಾಗಿವೆ ಎಂಬುದು ಸ್ಪಷ್ಟವಾಗಿದೆ.[34] (1) ನಜರೇತಿನ ಯೇಸುವಿನ ಪಂಡಿತರು ಇಲ್ಲದೇ ಯೇಸು ತಂದೆಯನ್ನು ತಿಳಿಯುವಂತೆ ಮಾಡಿದನು (ಯೋಹಾನ 7:28, 29; 15:15). (2) ಯೇಸು ಪಾಪದ ಕೊಂಡಿಯನ್ನು ಮುರಿದನು ಅದರ ಮೂಲಕ ಮನುಷ್ಯರು ದೇವರೊಡನೆ ಅನ್ಯೋನ್ಯ ಸಂಬಂಧವನ್ನು ಹೊಂದಿಕೊಳ್ಳಲು ಅನುವಾಯಿತು (ರೋಮಾಪುರ 5:1; 1 ಯೋಹಾನ 1:7). (3) ಪ್ರಸ್ತುತದಲ್ಲಿಯೂ ಕೂಡಾ, ಯೇಸು ದೇವರು ಮತ್ತು ಮನುಷ್ಯರ ಮಧ್ಯ ವಿಜ್ಞಾಪಿಸುವವನಾಗಿದ್ದಾನೆ (1 ತಿಮೋಥೆ 2:5; ಇಬ್ರಿಯ 7:25).

ಈಗಾಗಲೇ ಆತನ ಮರಣದ ಅರ್ಥ, ಯೇಸುವಿನ ರಕ್ತದ ಬಗ್ಗೆ ಅಪೊಸ್ತಲನು ಪ್ರತಿಪಾದಿಸಿದ್ದಾನೆ. ಆ ವಿಷಯದಲ್ಲಿ, ಕ್ರಿಸ್ತನ ಮರಣವು ಸೋಲಲ್ಲ ಅದು ಜಯವಾಗಿದೆ, ಇದು ಒಬ್ಬನ ಮರಣವಲ್ಲ ಆದರೆ ಜೀವವಾಗಿದೆ ಎಂದು ಘೋಷಿಸುವಂತ ಸಂದೇಶವನ್ನು ಆತನು ಸ್ಪಷ್ಟಪಡಿಸಿದ್ದಾನೆ. **ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿ ಆತನಿಗೆ ಪ್ರಭಾವವನ್ನು ಕೊಟ್ಟನು.** ಯೇಸುವನ್ನು "ಸತ್ತಮೇಲೆ ಜೀವಿತನಾಗಿ ಎದ್ದುಬಂದ ಮಹತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನು" ಎಂದು ದೇವರು ಘೋಷಿಸಿದ್ದನ್ನು ಪೌಲನು ರೋಮಾಪುರದವರಿಗೆ ಬರೆಯುವಾಗ ಖಂಡಿತವಾಗಿ ಹೇಳುತ್ತಾನೆ (ರೋಮಾಪುರ 1:4). ನಂಬಿಕೆಯ ಮೂಲ ಅರಿಕೆಯನ್ನು ಆತನು ಮುಂದಿಟ್ಟಿದ್ದು, "ಶಾಸ್ತ್ರದಲ್ಲಿ ಮುಂತಿಳಿಸಿದ ಪ್ರಕಾರ ಕ್ರಿಸ್ತನು ನಮ್ಮ ಪಾಪನಿವಾರಣೆಗಾಗಿ ಸತ್ತನು ಹೂಣಲ್ಪಟ್ಟನು, ಶಾಸ್ತ್ರದಲ್ಲಿ ಪ್ರಕಾರ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು" ಎಂದು ಕ್ರೈಸ್ತತ್ವದ ತತ್ವವನ್ನು ಒಬ್ಬನು ಹೀಗೂ ಹೇಳಬಹುದಾಗಿದೆ (1 ಕೊರಿಂಥ 15:3, 4). ದೇವರಲ್ಲಿನ ಕ್ರಿಸ್ತೀಯ ನಂಬಿಕೆಯ ತಿರುಳು ಮತ್ತು ನಿತ್ಯ ಜೀವಕ್ಕಾಗಿನ ನಿರೀಕ್ಷೆಗಳು ಯೇಸು ಮರಣಿಸುವದು ಮತ್ತು ಮತ್ತೇ ಜನರ ಮಧ್ಯದಲ್ಲಿ ಅವರತಿಸುವದು, ದೇವರ ಶಕ್ತಿಯ ಮೂಲಕ ಎಬ್ಬಿಸಿದ್ದು ಆಗಿದೆ. ದೇವರು ಕೊಟ್ಟಂತಹ ಪುನರುತ್ಥಾನದಲ್ಲಿ ಅಥವಾ ಆತನ ರಾಜ್ಯವಿರುವಂಥ ದೇವರ ಬಲಗಡೆಯಲ್ಲಿ ಆತನ ಆರೋಹಣವು ಇರುವದಾಗಿದೆ (ಅಪೊಸ್ತಲರ ಕೃತ್ಯಗಳು 2:33; ರೋಮಾಪುರ 8:34; 1 ಕೊರಿಂಥ 15:25). ಆ ಮಹಿಮೆಯು ಯೇಸು ಅನುಭವಿಸಿದಂಥ ಮಹಿಮೆಯು ಆಗಿದ್ದು ಆತನ ಹಿಂಬಾಲಕರು ಹಂಚಿಕೊಳ್ಳುವಂಥದ್ದು ಆಗಿದೆ (1:8, 11).

ವಿಶ್ವಾಸಿಗಳಿಗೋಸ್ಕರ ಯೇಸು ಕ್ರಿಸ್ತನ ಮೂಲಕ ದೇವರು ಮಾಡಿದ್ದರ ಪರಿಣಾಮವು **ದೇವರಲ್ಲಿ ನೀವು ಆತನು ಮೂಲಕ ನಂಬಿಕೆಯಿಟ್ಟವರಾದಿರಿ** ಎಂಬುದು ಆಗಿದೆ. "ನಂಬಿಕೆ" ಮತ್ತು "ನಿರೀಕ್ಷೆ" ಎಂಬ ಪದಗಳು ವಿಶೇಷವಾಗಿ "ನಂಬಿಕೆಯು" ವಿಶ್ವಾಸವೆಂದು ಅರ್ಥಮಾಡಿಕೊಳ್ಳುವದಾಗಿದೆ. ಇದಕ್ಕೆ ಸಮಾನವಾದ ಅರ್ಥವು ಇನ್ನೂ ಅದರದ್ದೇ ಆದ ಸ್ಥಳದಲ್ಲಿ ಇರುವದಾಗಿದೆ. "ನಂಬಿಕೆ" ಕ್ರೈಸ್ತರು ಜೀವಿಸುವಂತಹ ಪ್ರಸ್ತುತ ಸಂಗತಿಗಳ ಅಡಿಯಲ್ಲಿ ಇರುವವು ಆಗಿದೆ. ಕ್ರೈಸ್ತರು ದೇವರಿಂದ ನಂಬಿಕೆಯ ಮೂಲಕ ರಕ್ಷಿಸಲ್ಪಟ್ಟಿದ್ದಾರೆ ಹಿಂದೆ ಪೇತ್ರನು ಹೇಳಿದ್ದು, ನಂತರದಲ್ಲಿ "ನೀವು ಆತನನ್ನು ಕಣ್ಣಾರೆ ಕಾಣದಿದ್ದರೂ" ಎಂದು ಸೇರಿಸಿದ್ದಾರೆ (1:5, 8). "ನಂಬಿಕೆಯು" ಪ್ರಾಯೋಗಿಕ ಘಟನೆಗಳ ಕೊರತೆಯಲ್ಲಿಯೂ

ಕೂಡಾ ದೇವರಲ್ಲಿ ವಿಶ್ವಾಸವಿಡುವದನ್ನು, ಆತನ ಮೇಲೆ ಆತುಕೊಳ್ಳುವದನ್ನು, ಸೂಚಿಸುವದಾಗಿದೆ. ಇನ್ನೊಂದೆಡೆಯಲ್ಲಿ ನಿರೀಕ್ಷೆಯು, ಭವಿಷ್ಯದ ಮೂಲವಾಗಿದೆ. ಕ್ರಿಸ್ತನಲ್ಲಿ ಆಶೀರ್ವಾದದ ಸಾಮ್ಯವು ಇರುವಾಗ, ಸಜೀವವಾದ ನಿರೀಕ್ಷೆ (1:3), ವಿಶ್ವಾಸಿಗಳಿಗೋಸ್ಕರ ಭವಿಷ್ಯದತ್ತ ಮತ್ತು ನಿತ್ಯ ಬಾಧ್ಯತೆಯತ್ತ ಎಳೆಯುವದಾಗಿದೆ.

## ನಾಶವಾಗದ ಬೀಜದಿಂದ ಹುಟ್ಟುವಿಕೆ (1:22-25)

**22ನೀವು ಸತ್ಯೋಪದೇಶಕ್ಕೆ ವಿಧೇಯರಾಗಿದ್ದು ನಿಮ್ಮ ಆತ್ಮಗಳನ್ನು ಶುದ್ಧಮಾಡಿಕೊಂಡಿದ್ದರಿಂದ ನಿಷ್ಕಪಟವಾದ ಸಹೋದರ ಸ್ನೇಹವುಳ್ಳವರಾಗಿರತಕ್ಕದ್ದು. ಹೀಗಿರಲಾಗಿ ಒಬ್ಬರನ್ನೊಬ್ಬರು ಹೃದಯಪೂರ್ವಕವಾಗಿಯೂ ಯಥಾರ್ಥವಾಗಿಯೂ ಪ್ರೀತಿಸಿರಿ. 23ನೀವು ಪುನರ್ಜನ್ಮ ಹೊಂದಿದವರಾಗಿದ್ದೀರಲ್ಲಾ; ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ, ನಾಶವಾ ಗದ ಬೀಜದಿಂದಲೇ ಉಂಟಾದದ್ದು. ಅದು ದೇವರ ಸದಾಜೀವವುಳ್ಳ ವಾಕ್ಯದ ಮೂಲಕವಾಗಿ ಉಂಟಾಯಿತು.**

**24ನರಜಾತಿಯೆಲ್ಲಾ ಹುಲ್ಲಿನ ಹಾಗಿದೆ,**
**ಅದರ ಪ್ರಭಾವವೆಲ್ಲಾ ಹುಲ್ಲಿನ ಹೂವಿನಂತಿದೆ,**
**ಹುಲ್ಲು ಒಣಗಿಹೋಗುವದು, ಹೂವು ಉದುರಿಹೋಗುವದು;**
**25ಕರ್ತನ ಮಾತೋ ಸದಾಕಾಲವೂ ಇರುವದು ಎಂದು ಹೇಳಿದೆಯಷ್ಟೇ. ಆ ಮಾತು ಯಾವುದೆಂದರೆ ನಿಮಗೆ ಸಾರಲ್ಪಟ್ಟ ಸುವಾರ್ತಾವಾಕ್ಯವೇ.**

ಎರಡನೆಯ ಸಾರಿಗೋಸ್ಕರ ಅಪೊಸ್ತಲನು ಕ್ರಿಸ್ತೀಯ ಜೀವಿತದ ಆರಂಭವನ್ನು ಸೂಚಿಸಿದ್ದಾನೆ (1:3, 23). "ನೀವು ತಿರುಗಿ ಹುಟ್ಟಿದವರಾಗಿದ್ದೀರಿ" ಎಂದು ಆತನು ಹೇಳಿದನು. ಕ್ರೈಸ್ತರಿಗೆ ಅವಶ್ಯವಿದ್ದ ಜೀವಿತವು ದೇವರು ಅವರ ಪಾಪಗಳನ್ನು ಕ್ಷಮಿಸಿದ ಮತ್ತು ಅವರನ್ನು ತನ್ನ ಸ್ವಂತವೆಂದು ಎಣಿಸಿದ ತರದ ಜನರಲ್ಲಿ ಪ್ರತಿಫಲಿಸುವದಾಗಿದೆ.

**ವಚನ 22.** ಮೂರನೆಯ ಸಾರಿ, ಪೇತ್ರನು ತನ್ನ ಓದುಗರಿಗೆ **ವಿಧೇಯತೆಯನ್ನು** ಪ್ರಸ್ತಾಪಿಸುವವನಾಗಿದ್ದಾನೆ (1:2, 14, 15, 22); ಮೂರನೆಯ ಸಾರಿ ವಿಧೇಯತೆ ಮತ್ತು ಪರಿಶುದ್ಧತೆಗಳು ಒಂದೇ ಬಟ್ಟೆಯ ತುಂಡಿನಂತಿದೆ ಎಂಬುದು ಅದು ಸ್ಪಷ್ಟವಾಗಿದೆ. ಶುದ್ಧಮಾಡಿಕೋ ಗ್ರೀಕ್‌ನಲ್ಲಿ ಸಂಪೂರ್ಣಕೃದ್ವಾಚಕವಾಗಿದೆ. ಕೃದಂತ ಒತ್ತಾಯವು ಬಹುಶಃ ವಿನಾಯಿತಿಯೊಡನೆ ಇರುವದಾಗಿರಬಹುದು ... ಕೊಂಡಿದ್ದರಿಂದ ಅಥವಾ ಕಾರಣೋತ್ಪಾದಕದಿಂದ, "ನೀವು ಹೊಂದಿರುವ ಕಾರಣ" ಎಂದಾಗಿದೆ. NASB ಭಾಷಾಂತರವು ವಿನಾಯಿತಿಯ ಬಲಕ್ಕೆ ಆರಿಸಿಕೊಂಡಿದ್ದು: "ನೀವು ಸತ್ಯೋಪದೇಶಕ್ಕೆ ವಿಧೇಯರಾಗಿದ್ದು ನಿಮ್ಮ ಆತ್ಮಗಳನ್ನು ಶುದ್ಧಮಾಡಿಕೊಂಡಿದ್ದರಿಂದ" ಎಂದಿರುವದಾಗಿದೆ. ಇದು ಕೇವಲ ಅನಿರೀಕ್ಷಿತವಾದದ್ದಾಗಿದ್ದು ವಿಧೇಯತೆ ಮತ್ತು ಶುದ್ಧಪಡಿಸಿಕೊಳ್ಳುವಿಕೆಗಳು 1:2, 3ರಲ್ಲಿ ಮತ್ತು 1:22, 23ರ ಎರಡರಲ್ಲೂ ಇರುವ ಹೊಸಹುಟ್ಟಿನಲ್ಲಿ ನಡೆಸುವಿಕೆಯನ್ನು ಜ್ಞಾಪಕಕ್ಕೆ ತರುವುದಾಗಿದೆ. **ಸತ್ಯವು** ದೃಢೀಕರಿಸುವದಕ್ಕೆ ಪ್ರಸ್ತಾವನೆಗಿಂತಲೂ ಹೆಚ್ಚಾಗಿದೆ. ಸತ್ಯವು ವಿಧೇಯವಾಗುವದಾಗಿದೆ. ಇದು ಪೇತ್ರನ ಓದುಗರು ವಿಧೇಯರಾಗುವಂತಹ ಬೇರ್ಪಡಿಸುವಿಕೆಯಲ್ಲಿ ಇರುವಂತಹ ಸತ್ಯವು ಅಲ್ಲ. ವಿಶೇಷವಾಗಿ, ಅವರು ಸುವಾರ್ತೆಯ ಸತ್ಯಕ್ಕೆ ವಿಧೇಯರಾಗದರು; ಯೇಸು ತಮಗಾಗಿ ಮರಣಿಸಿದನು ಎಂಬ ಸತ್ಯವನ್ನು ಅವರು ನಂಬಿದರು, ಮತ್ತು ಅವರು ಸತ್ಯದಲ್ಲಿನ ಬಾಧ್ಯತೆ ಅತ್ಯಗತ್ಯತೆಗೆ ಅವರು ಪ್ರತಿಕ್ರಯಿಸಿದರು. ಸತ್ಯಕ್ಕೆ ಅವರು ವಿಧೇಯರಾದಾಗ, ಅದೇ ಸಮಯದಲ್ಲಿ ಅವರು ಹೊಸದಾಗಿ ಹುಟ್ಟಿದರು ಮತ್ತು ದೇವರ ರಾಜ್ಯಕ್ಕಾಗಿ ಶುದ್ಧಪಡಿಸಿಕೊಂಡರು. "ಆತನ ಓದುಗರು ಸುವಾರ್ತೆಗೆ ಪ್ರತಿಕ್ರಯಿಸಿ

ವಿನೀತರಾಗಿ ವಿಧೇಯರಾಗುವ ಸಮಯಕ್ಕಾಗಿ, ಸತ್ಯದ ಅವಶ್ಯಕತೆಗಾಗಿ ಅವರು ಒಳಪಡುವ ಸಮಯಕ್ಕಾಗಿ ಆತನು ಹಿಂದಕ್ಕೆ ನೋಡುವವನಾಗಿದ್ದನು" ಎಂದು Raymond C. Kelcy ಪೇತ್ರನ ಬಗ್ಗೆ ಹೇಳಿದ್ದಾರೆ.[35]

ಹಿಂದೆ ಘಟಿಸಿದ ಕಾರ್ಯವನ್ನು ಆದರೆ ವರ್ತಮಾನದಲ್ಲಿ ಯಾವದು ನಿರಂತರವಾಗಿ ಪರಿಣಾಮವನ್ನು ಕೊಡುವದೋ ಅಂಥದ್ದನ್ನು ಗ್ರೀಕರ ಪರಿಪೂರ್ಣಕಾಲವು ಸೂಚಿಸುವುದಾಗಿದೆ. ಪೇತ್ರನು ತನ್ನ ಓದುಗರಿಗೆ ನೀವು ನಿಮ್ಮ ಆತ್ಮಗಳನ್ನು ಶುದ್ಧಮಾಡಿಕೊಳ್ಳ ಬೇಕು ಎಂದು ಹೇಳುತ್ತಾನೆ. ಪರಿಪೂರ್ಣತೆಯ ಬಳಕೆಯ ಮೂಲಕ, ಅಪೊಸ್ತಲನು ತನ್ನ ಓದುಗರಿಗೆ ಅವರು ಹೊಸದಾಗಿ ಹುಟ್ಟಿದಾಗ ಸಮಯದೆಡೆಗೆ ತಿರುಗಿ ನೋಡಬೇಕೆಂದು ಕಾರಣಕೊಡುತ್ತಾನೆ. ವರುಷಗಳ ಹಿಂದೆ, ಪೇತ್ರನು ಅವರು ತಮ್ಮ ಪಾಪಗಳ ಪರಿಹಾರಕ್ಕಾಗಿ ಪಶ್ಚಾತ್ತಾಪಪಟ್ಟು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಯೆರೂಸಲೇಮಿನಲ್ಲಿರುವ ಜನರ ದೊಡ್ಡ ಗುಂಪಿಗೆ ಹೇಳಿದನು (ಅಪೊಸ್ತಲರ ಕೃತ್ಯಗಳು 2:38). ಸುಮಾರು ಮೂರು ಸಾವಿರ ಜನರು ಪೇತ್ರನು ಘೋಷಿಸಿದ ಸತ್ಯಕ್ಕೆ ವಿಧೇಯರಾದರು, ಅವರು ತಿರುಗಿ ಹುಟ್ಟಿದವರು, ಅವರ ಆತ್ಮಗಳು ಶುದ್ಧಿಕರಿಸಲ್ಪಟ್ಟವುಗಳು ಆಗಿದ್ದವು. "ನವೀಕರಿಸುವಿಕೆಯ ತೊಳೆಯುವಿಕೆಯು" ಅದೇ ಹೊಸಹುಟ್ಟು ಆಗಿದೆ (ತೀತ 3:5). ಹೊಸಹುಟ್ಟು ಎಂದರೆ ನೀರಿನಲ್ಲಿ ದೀಕ್ಷಾಸ್ನಾನದ ಮುಳುಗಿಸುವಿಕೆಗಿಂತಲೂ ಹೆಚ್ಚಾದದ್ದು ಆಗಿದೆ. ಆದರೆ ನೀರಿನಲ್ಲಿ ಮುಳುಗಿಸದೇ ಹೋದರೆ ಹೊಸ ಹುಟ್ಟು ಇಲ್ಲ. ವಿಧೇಯತೆಯ ಮೂಲಕ ಅವರು ತಮ್ಮ ಆತ್ಮಗಳನ್ನು ಶುದ್ಧಪಡಿಸಿಕೊಳ್ಳದೇ ಹೋಗಿದ್ದರಿಂದ ತಿರುಗಿ ಹುಟ್ಟಿದ ಜನರ ಹಾಗೆ ನಡಕೊಳ್ಳಲು ಅಪೊಸ್ತಲು ಒತ್ತಾಯಿಸುವವನಾಗಿದ್ದಾನೆ.

ಕ್ರೈಸ್ತರು ತಮ್ಮ ಆತ್ಮಗಳನ್ನು ಶುದ್ಧಮಾಡಿಸಿಕೊಂಡದರಿಂದ ನಿಷ್ಕಪಾತವಾದ ಸಹೋದರ ಸ್ನೇಹವುಳ್ಳವರಾಗಿದ್ದರಿಂದ, ಪೇತ್ರನು ಅವರು ಹೃದಯಪೂರ್ವಕವಾಗಿಯೂ ಯಥಾರ್ಥವಾಗಿಯೂ ಪ್ರೀತಿಸಬೇಕು ಎಂದು ಒತ್ತಾಯಿಸುವವನಾಗಿದ್ದಾನೆ. Kelly ಹೀಗೆ ಬರೆಯುತ್ತಾರೆ,

> ... ವಿಗ್ರಹಾರಾಧನೆಯ ಮಾರ್ಗವನ್ನು ವಿರೋಧಿಸುವ ಜೀವಿತದ ರೀತಿಯಿಂದ, ಕ್ರೈಸ್ತನನ್ನು ವಿವರಿಸುವ ಕಾರ್ಯದಿಂದ ಲೇಖಕನು ಬೇರೆಯಾದ್ದನ್ನು ಕಾಣಬಹುದಾಗಿದೆ (1:15, 17, 18). ಈಗ ಆತನು ಅದಕ್ಕೆ ಮರಳುತ್ತಾ, ದೀಕ್ಷಸ್ನಾನ ಹೊಂದಿದ ಕ್ರೈಸ್ತನ ಗುಣವಾದಂಥ ಪರಿಶುದ್ಧತೆ ಮತ್ತು ದೈವಭಕ್ತಿಯ ಸಹೋದರತೆಯ ಭಾವನೆಯನ್ನು ಆತನು ಸೇರಿಸಿದ್ದಾನೆ.[36]

ಒಬ್ಬನ ಆತ್ಮವನ್ನು ಶುದ್ಧಿಸುವದು ಎಂಬುದರ ಅರ್ಥವು ಆತನನ್ನು ಶುದ್ಧಮಾಡುವದು ಎಂಬುದಕ್ಕಿಂತಲೂ ಬೇರೆಯೇನೂ ಇಲ್ಲ. ತಮ್ಮನ್ನು ತಾವು ಶುದ್ಧಮಾಡಿಕ್ಕೊಳ್ಳುವದರ ಬಗ್ಗೆ ಪೇತ್ರನ ಓದುಗರು ನಿಖರವಾಗಿ ಮಾತನಾಡುತ್ತಿಲ್ಲ; ಬದಲಾಗಿ, ತನ್ನ "ಕುರಿಯಂತಿರುವ ಪರಿಶುದ್ಧವಾದ ರಕ್ತವನ್ನು ಸುರಿದು" ಯೇಸುವು ಅವರನ್ನು ಬಿಡುಗಡೆ ಮಾಡಿದ್ದಕ್ಕಾಗಿ ದೇವರು ಅವರನ್ನು ಶುದ್ಧೀಕರಿಸಿದನು (1:19). ಇನ್ನೂ ಸತ್ಯಕ್ಕೆ ವಿಧೇಯವಾಗುವಲ್ಲಿನ ನಿರ್ಧಾರದ ಸತ್ಯವು ಅವರದೇ ಆದ ಮಾಡುವಿಕೆಯಲ್ಲಿ ಒಂದಾಗಿದೆ. ಪಂಚಾಶತ್ತಮ ದಿನದ ಪೇತ್ರನ ಪ್ರಸಂಗದ ನಂತರ, "ಬೇರೆ ಅನೇಕವಾದ ಮಾತುಗಳಿಂದ ಖಂಡಿತವಾಗಿ ಸಾಕ್ಷಿನುಡಿದು ವಕ್ರಬುದ್ಧಿಯುಳ್ಳ ಈ ಸಂತತಿಯರಿಂದ ತಪ್ಪಿಸಿಕೊಳ್ಳಿರಿ ಎಂದು ಎಚ್ಚರಿಸಿದನು" ಎಂದು ಲೂಕನು ದಾಖಲಿಸಿದ್ದಾನೆ (ಅಪೊಸ್ತಲರ ಕೃತ್ಯಗಳು 2:40; NRSV).[37] ವಿಶ್ವಾಸಿಗಳ ವಿಧೇಯತೆಯ ಪ್ರತಿಕ್ರಿಯೆಯೆಂದರೆ ಪಾಪಕ್ಷಮಾಪಣೆಯಲ್ಲಿನ ಪರಿಣಾಮವಾದ ಪರಿಣಾಮಕಾರಿ ಕಾರ್ಯವೇ ಆಗಿದೆ.

ಅವರು ನಂಬಿ, ಪಶ್ಚಾತ್ತಾಪಪಟ್ಟು, ಮತ್ತು ದೀಕ್ಷಾಸ್ನಾನಮಾಡಿಸಿಕೊಂಡಾಗ,

ಒಬ್ಬರಿಗೊಬ್ಬರ ಜೊತೆ ಅವರು ಹಂಚಿಕೊಂಡಂಥ "ಪ್ರೀತಿಗಿಂತಲೂ" ಹೆಚ್ಚು ಮೂಲವಾದ ಗುಣದ ನಿಯಮವನ್ನು ಹೊಂದಿರದ ಜನರ ಸಮುದಾಯದ ಅನ್ಯೋನ್ಯತೆಯನ್ನು ಅವರು ಆದರದಿಂದ ಸ್ವೀಕರಿಸುವ ಸುವಾರ್ತೆಯ ಸಂದೇಶದ ಅಗತ್ಯತೆಗೆ ಅವರು ಪ್ರತಿಕ್ರಯಿಸಬೇಕು ಎಂದು ಪೇತ್ರನು ತನ್ನ ಓದುಗರಿಗೆ ನೆನಪಿಸುವವನಾಗಿದ್ದಾನೆ. ಪೌಲನಂತೆ (1 ಕೊರಿಂಥ 13:13; 1 ಥೆಸಲೋನಿಕ 1:3), "ನಂಬಿಕೆ" "ನಿರೀಕ್ಷೆ" (1:21) ಮತ್ತು "ಪ್ರೀತಿ" ಇವುಗಳನ್ನು ಕ್ರಿಸ್ತೀಯ ಜೀವಿತದ ಮಾರ್ಗದಲ್ಲಿನ ಒಳಗಿನ ಬಲಗಳು ಎಂದು ಪೇತ್ರನು ಮುಂದಿಟ್ಟಿದ್ದಾನೆ. ವಿಶ್ವಾಸಿಗಳು ಅವರು ಗಳಿಸುವ ಮನ್ನಣೆ, ಆದರ ಮತ್ತು ಒಬ್ಬರಿಗೊಬ್ಬರ ಕಾಳಜಿಗಿಂತಲೂ ಹೆಚ್ಚು ಮಹತ್ವವಾದವರು ಎಂಬುದರ ಮಧ್ಯ ನಿರ್ವಹಿಸಲು ಯಾವುದೇ ನಿಯಮವು ಇಲ್ಲ. "ನಿಮ್ಮಲ್ಲಿ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು" ಎಂದು ಯೇಸು ಹೇಳಿದನು (ಯೋಹಾನ 13:35). "ನಾವು ಒಬ್ಬರನೊಬ್ಬರು ಪ್ರೀತಿಸಬೇಕೆಂಬುದೇ ನಾವು ಮೊದಲಿನಿಂದಲೂ ಕೇಳಿದ ವಾಕ್ಯವಾಗಿದೆ" ಎಂದು ಯೋಹಾನನು ಸೇರಿ ಸಿದ್ದಾನೆ (1 ಯೋಹಾನ 3:11).

ಪೇತ್ರನು ಬಳಸಿದಂಥ "ನಿಮ್ಮ ಸಹೋದರರರನ್ನು ಪ್ರೀತಿಸಿ" ಎಂಬ ಪದವು *philadelphia* ಆಗಿದ್ದು Pennsylvania ಪಟ್ಟಣ ಎಂಬ ಹೆಸರನ್ನು ಹೊಂದಿದೆ. ಆತನು ತಿರುಗಿ 3:8ರಲ್ಲಿನ ಪದವನ್ನು ಬಳಸಿದ್ದಾನೆ. ಸತ್ಯಕ್ಕೆ ವಿಧೇಯರಾಗಲು, ತಮ್ಮ ಆತ್ಮವನ್ನು ಪರಿಶುದ್ಧಿಸಿಕೊಳ್ಳುವದು, ಅದೇ ಸಮಯದಲ್ಲಿ ಎಲ್ಲರು ಸಮಾನಮಟ್ಟದವರು, ಸಹೋದರರು ಮತ್ತು ಸಹೋದರಿಯರು ಒಂದು ಸಮುದಾಯದಲ್ಲಿ ಸೇರಿಸುವದು ಆಗಿದೆ. ಮನುಕುಲಕ್ಕಾಗಿ ಆತನು ಪ್ರೀತಿಯನ್ನು ಹೊಂದಿರುವ ಕಾರಣದಿಂದ, ಯೇಸು ಮಾನವ ರಕೂಪವನ್ನು ಧರಿಸಿದನು (ಯೋಹಾನ 3:16). ಕ್ರಿಸ್ತನ ಶಿಷ್ಯರಾದವರು, ಕರ್ತನ ಉದಾಹರಣೆಯನ್ನು ಅನುಸರಿಸುವವರಾಗಿದ್ದು, ಮಾನವ ಜನಾಂಗದ ಎಲ್ಲವನ್ನು ಪ್ರೀತಿಸುವವರಾಗಿದ್ದಾರೆ. ಇನ್ನೂ ಎಲ್ಲರಿಗೋಸ್ಕರ ಇರುವಂಥ ವಿಶ್ವಾಸಿಗಳ ಕುಟುಂಬದಲ್ಲಿನ ಪ್ರೀತಿ ಹೊಂದಾಣಿಕೆಯು ಪ್ರೀತಿಯನ್ನು ಬಲಪಡಿಸುವಂಥದ್ದು ಅಥವಾ ಅರಿಯುವಂಥದ್ದು ಆಗಿದೆ (ಗಲಾತ್ಯ 6:10). ಪೇತ್ರನ ವಿಚಾರ ಹೀಗಿತ್ತು: ನಿಮಗೆ ಒಪ್ಪಿಸಲ್ಪಟ್ಟಂಥ ಸಂದೇಶಕ್ಕೆ ನೀವು ವಿಧೇಯರಾಗಿದ್ದರಿಂದ ನಿಮ್ಮ ನಂಬಿಕೆ ಮತ್ತು ನಿರೀಕ್ಷೆಯನ್ನು ಹಂಚಿಕೊಂಡಂಥವರೊಡನೆಯ ನಿಮ್ಮ ಪ್ರಾಮಾಣಿಕ ಪ್ರೀತಿಯು, ನೀವು ದೇವರಿಂದ ಆರಿಸಲ್ಪಟ್ಟವರಾದವರ ಹಾಗೆ ಮತ್ತು ಇತರರ ಬಗ್ಗೆ ಹೃದಯದಿಂದ ಉತ್ಸಾಹವುಳ್ಳ ಪ್ರೀತಿಯನ್ನು ಹೊಂದಿರುವಂಥದ್ದು ಆಗಿದೆ.

ಅಪೊಸ್ತಲನು ಪ್ರೀತಿಯ ಬಗೆಗಿನ ತನ್ನ ಎರಡನೆಯ ಉದಾಹರಣೆಯಲ್ಲಿ *agapaō* ಎಂಬ ಕ್ರಿಯಾಪದವನ್ನು ತೆಗೆದದ್ದರ ಬಗ್ಗೆ ಯಾವುದೇ ನಿರ್ಧಿಷ್ಟವಾದ ಸೂಚನೆಯೂ ಇಲ್ಲ. "ಸಹೋದರ ವಾತ್ಸಲ್ಯ ಮತ್ತು ಇತರರಿಗೋಸ್ಕರದ ಪ್ರೀತಿ ಇವುಗಳು ಸಮಾನವಾದ ವಿವರಣೆ ಆಗಿವೆ ಎಂಬುದರಲ್ಲಿ ಯಾವುದೇ ಸಂಶಯವು ಇಲ್ಲ."[38] ದೇವರು ಅವರನ್ನು ಹಾಳಾಗಿರುವಂತೆ ಮಾಡಿದಾಗ, ಸತ್ಯದ ಮೇಲಿನ ತಮ್ಮ ವಿಧೇಯತೆಗೆ ಆತನು ಅವರ ಆತ್ಮಗಳನ್ನು ಶುದ್ಧೀಕರಿಸಿದಾಗ ತನ್ನ ಓದುಗರು ಶುದ್ಧರಾದ ದೇವಜನರಾಗಬೇಕೆಂದು ಆತನು ಒತ್ತಾಯಿಸುವವನಾಗಿದ್ದಾನೆ. ಪೇತ್ರನ "ಉತ್ಸಾಹವುಳ್ಳ" ಎಂಬ ಪದದ ಮಹತ್ವದ ಸೇರಿಸುವಿಕೆಯು ಅಗತ್ಯತೆಯು ಆಗಿದೆ. ಗ್ರೀಕ್‌ನಲ್ಲಿ ಈ ಪದವು ವಾಕ್ಯದ ಕೊನೆಯಲ್ಲಿ ಒತ್ತಾಯಪೂರ್ವಕವಾಗಿ ಎಂದು ಇಡಲ್ಪಟ್ಟಿದೆ. ವಿಶ್ವಾಸಿಗಳ ಒಬ್ಬರಿಗೊಬ್ಬರ ಪ್ರೀತಿಯು ನಿರಂತರವಾದದ್ದು, ನೇರವಾದದ್ದು, ವಿವರಿಸಲು ಕಾತುರವುಳ್ಳದ್ದು ಆಗಿದೆ. ಎರಡನೆಯ ಶತಮಾನದಲ್ಲಿನ ವಿಗ್ರಹಾರಾಧಕರಂತೆ ಕಪಟಿಗಳಂತಿರುವವರು ಕ್ರಿಸ್ತನ ಹೆಸರನ್ನು ಹೊಂದಿರುವಂತ ಸಹೋದರರ ಬಗ್ಗೆ ತಿಳಿದವರಾಗಿದ್ದು, ಕ್ರೈಸ್ತರು ಹೊಂದಿದ ಒಬ್ಬರಿಗೊಬ್ಬರು ಸ್ವತ್ಯಾಗದ ಮನೋಭಾವವನ್ನು ಟೀಕಿಸುವವರೂ, ಕೆಲಸಾರಿ ಹಾಸ್ಯಮಾಡುವವರೂ ಆಗಿದ್ದರು. ಪೇತ್ರನು ಪತ್ರವು ಮುಂದುವರೆಯುತ್ತಿದ್ದ ಹಾಗೆ ಆತನು ತಿರುಗಿ ಸಹೋದರತ್ವದ

ಪರಿಕಲ್ಪನೆಗೆ ತಿರುಗಿ ಬರುವವನಾಗಿದ್ದಾನೆ (2:17; 5:9).

**ವಚನ 23.** ಹಿಂದಿನ ವಚನದಲ್ಲಿ, ತನ್ನ ಓದುಗರ ಶುದ್ಧ ಮಾಡುವಿಕೆಯನ್ನು ವಿವರಿಸಲು ಪೇತ್ರನು ಖಚಿತಕಾಲವನ್ನು ಬಳಸಿದ್ದಾನೆ. **ಇಲ್ಲಿ ಆತನು ತಿರುಗಿ ಅವರ ಮರು ಹುಟ್ಟನ್ನು ವಿವರಿಸಲು ಖಚಿತತೆಯನ್ನು ಬಳಸಿದ್ದಾನೆ.** ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ, ನಾಶವಾಗದ ಬೀಜದಿಂದಲೇ ಉಂಟಾದದ್ದು. ಸತ್ಯದಲ್ಲಿನ ಅವರ ವಿಧೇಯತೆಯು ಮತ್ತು ಅವರ ಹೊಸ ಹುಟ್ಟು ಎರಡು ಒಬ್ಬರಿಗೊಬ್ಬರು ತೋರಿಸುವ ಪ್ರಾಮಾಣಿಕ ಪ್ರೀತಿಯ ಪರಿಣಾಮವಾಗಿದೆ. ಎರಡು ಪದಗಳು ಇನ್ನೆರಡನ್ನು ಸೂಚಿಸುವವು ಆಗಿವೆ. ಹಿಂದೆ ಅಪೊಸ್ತಲನು ಕ್ರೈಸ್ತರು ಸಜೀವವಾದ ನಿರೀಕ್ಷೆಗೋಸ್ಕರ ಮರುಹುಟ್ಟಿದವರಾಗಿದ್ದಾರೆ ಎಂದು ಹೇಳಿದ್ದಾನೆ (1:3). ಅವರ ಮರುಹುಟ್ಟನ್ನು ಅದು **ಅದು ದೇವರ ವಾಕ್ಯದ ಮೂಲಕವಾಗಿ** ವಾಕ್ಯದ ಮೂಲಕವಾಗಿ ಉಂಟಾದ ನಾಶವಾಗದ ಬೀಜಕ್ಕೆ ಹೋಲಿಸುತ್ತಾನೆ.

ಹೊಸದಾಗಿ ಹುಟ್ಟುವದರ ಬಗೆಗೆ ಯೇಸು ನಿಕೋದೇಮನ ಜೊತೆ ಮಾತನಾಡುವಾಗ, ಆತನು ಹೊಸಹುಟ್ಟನ್ನು ದೀಕ್ಷಾಸ್ನಾನ ("ನೀರಿನಿಂದ ಹುಟ್ಟುವದು"; ಯೋಹಾನ 3:5) ಮತ್ತು ಪರಿಶುದ್ಧಾತ್ಮನಿಂದ ಹುಟ್ಟುವದು ಎರಡನ್ನು ಬಲವಾಗಿ ಜೋಡಿಸಿದ್ದಾನೆ. (ಹೊಸಹುಟ್ಟು ಇದಕ್ಕಾಗಿ 1:3ರ ಮೇಲಿನ ವ್ಯಾಖ್ಯಾನವನ್ನು ನೋಡಿರಿ.) 1:3ರಲ್ಲಿ, ಹೊಸಹುಟ್ಟು ಯೇಸು ಕ್ರಿಸ್ತನ ಪುನರುತ್ಥಾನದಿಂದ ಬರುವದಾಗಿದೆ. ಇಲ್ಲಿ ನಾಶವಾಗದ ಪದದ ಮೂಲಕ ಇಲ್ಲಿದ್ದು, ಆ ಸಂದೇಶವು ಯೇಸು ದೇವರ ಬಲದಿಂದ ಎಂಬುದು ಆಗಿದೆ. ಒಂದು ಅನುಕೂಲಕರ ಸಂಗತಿಗೋಸ್ಕರ, ಸುವಾರ್ತೆಯ ಪದವು ಅವರಿಗೆ ಬೋಧಿಸಲ್ಪಟ್ಟಿತು (1:12). ಇನ್ನೊಂದರಿಂದ ಇದು ಪರಿಶುದ್ಧಾತ್ಮನ ಚಲಿಸುವ ಶಕ್ತಿಯೂ ಆಗಿದೆ. ಪದದ ಕ್ರಿಯಾತ್ಮಕ ಬಲವು ಹಳೆಯ ಒಡಂಬಡಿಕೆಯ ಓದುಗರಿಗೆ ತಿಳಿದಂಥದ್ದೆ ಆಗಿದೆ. ದೇವರು ಮಾತನಾಡಿದ ಪದಗಳಿಂದ, ಜಗತ್ತು ಇರುವಿಕೆಯಲ್ಲಿ ಬಂದಿತು (ಆದಿಕಾಂಡ 1:3), ಮತ್ತು ದೇವರು ಮನುಷ್ಯರ ಸಂಗತತಿಗಳಲ್ಲಿ ಆಳತೊಡಗಿದನು (ಕೀರ್ತನೆ 33:9). ಆತ್ಮದಿಂದ ಪ್ರೇರಿತವಾದ ವಾಕ್ಯದ ಮೂಲಕ ಕ್ರೈಸ್ತರು ಮರುಹುಟ್ಟಿದವರಾಗಿದ್ದಾರೆ. ದೇವವಾಕ್ಯವು ಅವರಲ್ಲಿ ಸಹಜವಾಗಿರುವ ಜೀವಿಸುವ ಗುಣವನ್ನು ಹೊಂದಿದ್ದು, ಅವರಿಗೆ ಪ್ರೇರೇಪಿಸಿದ ಆತ್ಮನ ಕಾರಣದಿಂದ ಮತ್ತು ಜೀವಿಸುವದಕ್ಕೆ ಅವರನ್ನು ಸಮರ್ಥರನ್ನಾಗಿಸುವದಕ್ಕೆ ಜೀವಿಸುವವರೂ ಆಗಿರುವದನ್ನು ಪೇತ್ರನು ಅರಿತಿದ್ದಾನೆ. ವಾಕ್ಯ ಮಾತ್ರ ಇರುವಂತದ್ದಾಗಿದೆ, ಇದು ನಿರಂತರವಾಗಿರುವದು ಆಗಿದೆ. ಇದು ಶಾಶ್ವತವಾದದ್ದು ಆಗಿದೆ.

ವಾಕ್ಯವು ಹೇಳಲ್ಪಟ್ಟಿರುವದು ಅಥವಾ ಮಾತನಾಡಿದ್ದು ಆಗಿರಬಹುದು, ಆದರೆ ಇನ್ನೊಂದು ವಿಚಾರದಲ್ಲಿ ಪರಿಣಾಮವನ್ನು ತರುವ ಶಕ್ತಿಯು ಇದು ಹೊಂದಿದೆ. ಆತನ ಚಿತ್ತದ ಪ್ರಕಾರ ಆತ್ಮನು ಸಾಗಿದಂತೆ (ಯೋಹಾನ 3:8), ಹೀಗೆ ಜನರ ಹೃದಯದಲ್ಲಿನ ಮರ್ಮದ ಬಲದಂತೆ ಜಗತ್ತು ಕುಣಿಯುವದಾಗಿದೆ. ಇದು ಜೀವಿತಗಳನ್ನು ಬದಲಾಯಿಸುವದು ಆಗಿದೆ. "... ಸತ್ಯ ಬೋಧನೆಯ ವಾಕ್ಯದಿಂದ ನಮ್ಮನ್ನು ಹುಟ್ಟಿಸಿದನು" (ಯಾಕೋಬ 1:18). ಇದು ಇನ್ನೊಬ್ಬರ ಅನುಪಸ್ಥಿತಿಯಲ್ಲಿನ ಆತ್ಮ ಅಥವಾ ವಾಕ್ಯದ ಕಾರ್ಯದ ಅರ್ಥರಹಿತ ಮಾತು ಆಗಿದೆ. ಹೊಸದಾಗಿ ಹುಟ್ಟಿದ ಕ್ರೈಸ್ತರ ಮೂಲಕದ ನಾಶವಾಗದ ಬೀಜವು ಪೇತ್ರನ ಓದುಗರು ಅವರ ಶುದ್ಧೀಕರಣದಲ್ಲಿ ಪರಿಣಾಮವಾದಂಥ ಸತ್ಯಕ್ಕೆ ವಿಧೇಯರಾದಂಥದಕ್ಕೆ ಸಮಾನವಾದದ್ದಾಗಿದೆ. ಪೇತ್ರನು "ನಾಶವಾಗದ" ಬೀಜವನ್ನು ಮಾನವ ಕುಲವು ಹುಟ್ಟಿಸುವ "ನಾಶವಾಗುವ" ಬೀಜದ ಜೊತೆ ವ್ಯತ್ಯಾಸಮಾಡುವವನಾಗಿದ್ದಾನೆ. ಯೋಹಾನ 1:13ರಲ್ಲಿದ್ದಂತೆ ಅಲ್ಲಿ ಮಾನವ ಬೀಜ ಮತ್ತು ದಿವ್ಯತೆ ಮಧ್ಯೆ ಪ್ರಜ್ಞಾಪೂರಿತ ವ್ಯತ್ಯಾಸವು ಇರುವದಾಗಿದೆ. ಈ ಜಗತ್ತಿನಲ್ಲಿ ಮಾನವ ಜೀವಿತದ ಜೊತೆ ಹೊಂದಿದ ಎಲ್ಲವೂ ಕ್ಷಣಿಕವಾದದ್ದಾಗಿದೆ. ಇದು ಬೇಗನೇ ಕಳೆದುಹೋಗುವದಾಗಿದೆ; ಇದೇ ಕೊನೆಯಲ್ಲ. ಹೊಸ ಹುಟ್ಟಿಗೆ ಬೀಜವು ನಿರಂತರವಾದ

ಮತ್ತು ನಿತ್ಯವಾದ ಸಜ್ಜೀವವಾದ ಶಕ್ತಿ ಕೊಡುವದು ಆಗಿದೆ. ಆತನು ಸೂಚಿಸಿದ ವ್ಯತ್ಯಾಸವು ಮುಂದಿನ ವಚನದಲ್ಲಿ ಸ್ಪಷ್ಟವಾಗಿದೆ.

**ವಚನ 24.** ಹೊಸಹುಟ್ಟು, ನಾಶವಾಗದ ಬೀಜದಲ್ಲಿರುವಂಥ ಕಾರಣತ್ವವಾಗಿದ್ದು, ದೇವರ ವಾಕ್ಯವನ್ನು ಶಾಶ್ವತವಾಗಿಸುವದು ಆಗಿದ್ದು, ಯೆಶಾಯ 40:6-8ನ್ನು ಪೇತ್ರನ ಮನದಲ್ಲಿ ತರುವದಾಗಿದೆ (ಕೀರ್ತನೆ 103:15-17ನ್ನು ಹೋಲಿಸಿ). ಈ ಪರಿಚ್ಛೇದವು ಹಿಂದಿನ ವಚನವನ್ನು ದೃಢಪಡಿಸುವಲ್ಲಿ ಬೆಂಬಲಿಸುವದು ಮತ್ತು ಬಲಪಡಿಸುವದು ಆಗಿದ್ದು, ದೇವರ ವಾಕ್ಯವನ್ನು ಅದು ಎಂದಿಗೂ ಶಾಶ್ವತವಾಗಿ ಇರಿಸುವದು ಆಗಿದೆ, ಯಾಕೋಬನು ಸಹ ಯೆಶಾಯನ ಪರಿಚ್ಛೇದದಿಂದ ಪ್ರಾರಂಭಿಕವಾಗಿ ತಿಳಿಸುವವನಾಗಿದ್ದಾನೆ (ಯಾಕೋಬ 1:11), ಆದರೆ ಕರ್ತನ ಸಹೋದರನು ಇದನ್ನು ಭಿನ್ನವಾಗಿ ಆದರೆ ಸಂಬಂಧಿತ ಅಂಶವನ್ನಾಗಿ ಮಾಡುವದನ್ನು ಕಾಣುತ್ತಾನೆ. ಪೇತ್ರನು ಕೆಲ ಸಣ್ಣ ಬದಲಾವಣೆಗಳನ್ನು ಮಾಡಿದ್ದಾಗ್ಯೂ ಉಲ್ಲೇಖವು Septuagint ರೀತಿಯಾಗಿತ್ತು (LXX). ಯೇಸುವಿನ ಜನನಕ್ಕಿಂತ ಮುಂಚೆಯ ಎರಡುನೂರು ವರ್ಷಗಳ ಹಿಂದೆ ಹಳೆಯ ಒಡಂಬಡಿಕೆಯು ಇಬ್ರಿಯದಿಂದ ಗ್ರೀಕ್‌ಗೆ ಭಾಷಾಂತರವಾಗಿತ್ತು. ಗ್ರೀಕೋ ರೋಮನ್ ಜಗತ್ತಿನ ಮೂಲಕ ಹರಡಿದ ಯೆಹೂದಿಯರಿಂದ Septuagint ವಿಸ್ತೃತವಾಗಿ ಬಳಸಲ್ಪಡುತಿತ್ತು. ಹೊಸ ಒಡಂಬಡಿಕೆಯ ಅವಧಿಯ ಮೂಲಕ, ಅನೇಕ ಯೆಹೂದಿಗಳು ಗ್ರೀಕೋ ಜಗತ್ತಿಗೆ ಹೊಂದಿಕೊಳ್ಳಲು ಪ್ರಯತ್ನಿಸಿದರು. ಈಗ ಆಧುನಿಕ ಜಗತ್ತಿನ ಇಂಗ್ಲೀಷ್ ಓದುಗರಿಗೆ ಹೊಂದಿರುವ ಭಾಷಾಂತರದಂತೆ ತಮ್ಮ ಆಡು ಭಾಷೆಯಲ್ಲಿನ ಭಾಷಾಂತರದ ಅಗತ್ಯತೆಯು ಅವರಿಗಿತ್ತು.

ಪೇತ್ರನ ನಿರ್ಧಿಷ್ಟ ಕಾಳಜಿಯಾಗಿರದ ಪ್ರವಾದಿಗಳ ಸಂಗತಿಯಲ್ಲಿ ಉದ್ದೇಶವನ್ನು ಯೆಶಾಯ 40:6-8 ಹೊಂದಿದೆ. ಯೆಶಾಯನು ಹೆಸರಿಸಿದ ಜನರು ಬೆಬಿಲೋನಿನ ಭೂಮಿಯಲ್ಲಿ ದಾಸರಾಗಿದ್ದಂತೆ ಕ್ಷೀಣಿಸಿಹೋಗಿದ್ದರು. ದೇವರ ವಾಗ್ದಾನಗಳನ್ನು ಬಿಟ್ಟುಬಿಡುವದಕ್ಕೆ - ದೇವರನ್ನೇ ಬಿಟ್ಟುಬಿಡುವದಕ್ಕೆ ಇವೆಲ್ಲ ಸಾಧ್ಯತೆಗಳಾಗಿದ್ದವು. ಜನರನ್ನು ಸಂತೈಸಲು, ಅವರಿಗಾಗಿ ಅರಣ್ಯದಿಂದ ಸ್ವದೇಶಕ್ಕೆ ಹಿಂದಕ್ಕೆ ತರಲು ಮಾರ್ಗವನ್ನು ಸಿದ್ಧಮಾಡುವದಕ್ಕಾಗಿ ದೇವರು ಪ್ರವಾದಿಗಳನ್ನು ಕಳುಹಿಸಿದನು. ಜನರ ಶಕ್ತಿಯು ಬರುತ್ತಿತ್ತು ಮತ್ತು ಹೋಗುತ್ತಿತ್ತು; ರಾಜ್ಯಗಳು ಎಳುತ್ತಿದ್ದವು ಮತ್ತು ಬೀಳುತ್ತಿದ್ದವು. ಎಲ್ಲರ ದೇಹವು ಹುಲ್ಲಿನಂತಿತ್ತು. ದೇವರ ವಾಕ್ಯವು, ಆತನ ವಾಗ್ದಾನವು, ನಂಬಿಗಸ್ಥವಾಗಿತ್ತು. ಇದು ಎಂದೆಂದಿಗೂ ಶಾಶ್ವಾತವಾಗಿ ಇರುವದು ಆಗಿತ್ತು.

ತಮ್ಮ ನಂಬಿಕೆಗಾಗಿ ಸಂಕಟಪಡುವ ಏಷಿಯಾದ ಕ್ರೈಸ್ತರ ಸ್ಥಿತಿಯನ್ನು ಯೆಶಾಯನು ವರ್ಣಿಸಲು ಬಯಸಿದ್ದಕ್ಕೆ ಪೇತ್ರನು ಯಾವ ವಾದವನ್ನು ಮಾಡುತ್ತಿಲ್ಲ. ಬದಲಾಗಿ, ದೇವರ ವಾಕ್ಯವು ಎಂದಿಗೂ ಬಿದ್ದುಹೋಗದು ಎಂಬ ವಾಗ್ದಾನವನ್ನು ಪೇತ್ರನು ನೋಡಿದಾಗ, ಯೆಶಾಯ ಮೂಲ ವೀಕ್ಷಕರಾದಂಥವರಿಗೆ ಇರುವಂತೆ ಆತನ ಓದುಗರಿಗೂ ಆ ತತ್ವವು ನಿಜವಾದದ್ದಾಗಿದೆ. ಯೆಶಾಯನ ಪರಿಚ್ಛೇದದಿಂದ ಮಾನವ ಜನಾಂಗವೆಲ್ಲ ಇರುವ ಮತ್ತು ಅವರು ಮಾಡುತ್ತಿರುವ ಎಲ್ಲವುಗಳು ಗುರುತಿಸಲ್ಪಟ್ಟವು ದಯನೀಯ ಅನಿಶ್ಚಿತತೆಯು ಆಗಿದೆ. ಜನರು ಶಾಶ್ವಾತವಾದ ಮತ್ತು ಬದಲಾಗದವುಗಳಿಗೆ ಇರುವದು ಆಗಿದೆ, ಆದರೆ ನರಜಾತಿಯೆಲ್ಲಾ ಹುಲ್ಲಿನ ಹಾಗಿದೆ ... ಹುಲ್ಲು ಒಣಗಿಹೋಗುವದು, ಹೂವು ಉದುರಿಹೋಗುವದು ಆಗಿದೆ. ನರಜಾತಿನ ಮತ್ತು ಅದರ ಪ್ರಭಾವವು ಯಾವುದೇ ಒಂದೇ ಅಂಶವನ್ನು ಕೊಡುವದಿಲ್ಲ, ಕ್ಷಯಿಸುವ ನಿಶ್ಚಿತತೆಗೆ ಅವಶ್ಯವಿರುವಂಥ ಅದರ ಮಾನವನ ಅನುಭವಕ್ಕೆ ಯಾವುದೇ ಏಕತೆಯನ್ನು ಕೊಡುವದಿಲ್ಲ. ನರಜಾತಿಯು ಕ್ಷೀಣವದು ಆಗಿದೆ. ಇದರ ಬಲು ಶ್ಲಾಘನೀಯವಾದ ಮತ್ತು ಉತ್ತಮ ಗುಣಗಳು ಬೀಳುವವು ಮತ್ತು ಮರೆತುಹೋಗುವಂತವು ಆಗಿವೆ. ಯೆಶಾಯನ ಓದುಗರಾಗಲೀ ಅಥವಾ ಪೇತ್ರನ ಓದುಗರಾಗಲೀ ಮಾನವ ನಿರ್ಮಾಣದಲ್ಲಿ ತಮ್ಮ ವಿಶ್ವಾಸವಿಡುವಷ್ಟು ಜಾಣರಾಗಿದ್ದರು. ದೇವರು ಆತನ ಸಂದೇಶಗಳು ಜೀವಿತಕ್ಕೆ ನೈಜತೆಯನ್ನು ಶಾಶ್ವತವಾಗಿ ಇರಿಸುವವು ಆಗಿವೆ.

**ವಚನ 25.** ಇದು ದೇವರು ತಾನೇ ಮತ್ತು ಆತನ ಸ್ವ - ಅವತರಿಸಿಕೊಳ್ಳುವಿಕೆಯು ಇದು

ಜೀವಿತದ ಸಾಮ್ಯತೆಯನ್ನು ಕೊಡುವದಾಗಿದೆ. ಮಾನವನ ಅನುಭವ ಮತ್ತು ಮಾನವ ಪ್ರಭಾವ ಇವುಗಳನ್ನು ಬಿಟ್ಟು, ದೇವರು ಮತ್ತು ಆತನ ಜಗತ್ತು ಎಂದೆಂದಿಗೂ ಪಾಲಿಸುವದಾಗಿದೆ. (*logos,* "ವಾಕ್ಯ") 1:23ರಿಂದ (*rhēma,* "ವಾಕ್ಯ") 1:25ರಲ್ಲಿ ರೋಚನಾತ್ಮಕ ಬದಲಾವಣೆಯು ಇರುವದಾಗಿದೆ. ಈ ಪ್ರಸಂಗದಲ್ಲಿರುವ ಎರಡು ಪದಗಳು ಸಮಾನವಾದವುಗಳು ಆಗಿವೆ. ನಂತರದ ಪದವು LXX ನಲ್ಲಿ ಬಳಸಲ್ಪಟ್ಟಿದೆ. ಪೇತ್ರನು ಮಾಡಿದ ಅಂಶದ ಮೇಲೆ ಪದಗಳ ಬದಲಾವಣೆಯಲ್ಲಿ ಯಾವುದೇ ಪರಿಣಾಮವಿಲ್ಲ. "ಇದು ದೇವರ ಜೀವಕರವಾದ ಮತ್ತು ಶಾಶ್ವಾತವಾದ ವಾಕ್ಯವಾಗಿದೆ *[logos]* ಅದು ಯೆಶಾಯ 40:8ರಲ್ಲಿ ಕರೆಯಲ್ಪಡುವ ದೇವರ ಮಾತು *[rhēma]*" ಆಗಿದೆ. ಪೇತ್ರನು ಅವರಿಗೆ ಬೋಧಿಸಲಾದ "ಕರ್ತನ ಮಾತು" ಎಂದಿಗೂ ಶಾಶ್ವಾತವಾಗಿ ಇರುವದಾಗಿದೆ ಎಂದು ಪೇತ್ರನು ಹೇಳುತ್ತಾನೆ.

ಪೇತ್ರನ ಯೋಚನೆಯಲ್ಲಿನ ನಿರಂತರೆಯು 1:22ರಲ್ಲಿ ಆತನು ಮುಂದುವರೆದಂತೆ ಅದು ನಿರ್ಲಕ್ಷಿಸಲ್ಪಟ್ಟದ್ದಲ್ಲ. ಇದು ವಿಧೇಯತೆಯ ಮೂಲಕ ಸತ್ಯದೆಡೆಗೆ ಕ್ರೈಸ್ತರು ತಮ್ಮ ಆತ್ಮವನ್ನು ಶುದ್ಧೀಕರಿಸಿಕೊಳ್ಳುವದು ಆಗಿದೆ. ಅವರು ವಿಧೇಯರಾದ ಸತ್ಯವು ಶಾಶ್ವತವಾದದ್ದರಲ್ಲಿ, ಜೀವಿಸುವದರಲ್ಲಿ, ಮತ್ತು ದೇವರ ವಾಕ್ಯಕ್ಕೆ ಆತುಕೊಳ್ಳುವಲ್ಲಿ ಸ್ವಾಭಾವಿಕವಾಗಿ ಇರುವಂಥದ್ದು ಆಗಿದೆ. ವಿಧೇಯತೆಯ ಮೂಲಕ ಸತ್ಯದೆಡೆಗೆ ಕ್ರೈಸ್ತರು ತಮ್ಮ ಆತ್ಮವನ್ನು ಶುದ್ಧೀಕರಿಸಿಕೊಳ್ಳುವದು ಆಗಿದೆ. ಅವರು ವಿಧೇಯರಾದ ಸತ್ಯವು ಶಾಶ್ವತವಾದದ್ದರಲ್ಲಿ, ಜೀವಿಸುವದರಲ್ಲಿ, ಮತ್ತು ದೇವರ ವಾಕ್ಯಕ್ಕೆ ಆತುಕೊಳ್ಳುವಲ್ಲಿ ಸ್ವಾಭಾವಿಕವಾಗಿ ಇರುವಂಥದ್ದು ಆಗಿದೆ. ವಿಧೇಯತೆಯ ಮೂಲಕ ಸತ್ಯದೆಡೆಗೆ, ಅವರು ಮರುಹುಟ್ಟಿದವರು ಆಗಿದ್ದಾರೆ. "ಕರ್ತನ ಮಾತಾದ" ಸತ್ಯವು ಅದು "ಎಂದಿಗೂ ಶಾಶ್ವಾತವಾಗಿರುವದು" ಆಗಿದೆ ಮತ್ತು ಪೇತ್ರನ ಓದುಗರಿಗೆ ಸಾರಲ್ಪಟ್ಟ ಸುವಾರ್ತಾ ವಾಕ್ಯವೇ ಅದೇ ಆಗಿದೆ. ಎಲ್ಲೆಡೆಯೂ ಸಮಯ ಮತ್ತು ಸ್ಥಳದ ಮೂಲಕ, ಸತ್ಯದ ಅದೇ ಪದವು ಬೋಧಿಸಲ್ಪಟ್ಟಾಗ, ಕ್ರೈಸ್ತರು ಅದೇ ಪರಿಣಾಮವನ್ನು ಬಯಸುವವರಾಗಿರುತ್ತಾರೆ. ಜನರು ಮರುಹುಟ್ಟಿದವರು ಮತ್ತು ನಿತ್ಯದ ಬಾಧ್ಯತೆಯನ್ನು ಹಂಚಿಕೊಳ್ಳುವವರು ಆಗಿರುತ್ತಾರೆ.

## ಅನ್ವಯ

### ಪರಿಶುದ್ಧತೆ ಮತ್ತು ದೀಕ್ಷಾಸ್ನಾನ (1:3-25)

"ದೀಕ್ಷಾಸ್ನಾನ" ಎಂಬ ಪದವು ಕೇವಲ ಒಂದು ಸಾರಿ (3:21) ಕಾಣಿಸಿಕೊಂಡಿದ್ದಾಗ್ಯೂ, ದೀಕ್ಷಾಸ್ನಾನವು ಪತ್ರಿಕೆಗಳಲ್ಲಿ ಪ್ರಬಲವಾದ ಅಂಶವಾಗಿದೆ ಎಂದು ಸತ್ಯವೇದ ಆಸಕ್ತ ವಿದ್ಯಾರ್ಥಿಗಳು ಹಿಂದೆಯೇ ಗುರುತಿಸಿದ್ದಾರೆ. ದೀಕ್ಷಾಸ್ನಾನ ಮತ್ತು ಹೊಸ ಹುಟ್ಟು ಇವುಗಳು ಸಮಾನವಾಗಿಲ್ಲ, ಅಥವಾ ಅದರ ಹತ್ತಿರದ ಸಹಭಾಗಿತ್ವದಿಂದ ತೊಡೆದುಹಾಕಲಾಗುವದು ಇಲ್ಲ. ಒಬ್ಬ ವಿಶ್ವಾಸಿಯು ದೀಕ್ಷಾಸ್ನಾನ ಹೊಂದಿದಾಗ, ಆತನ ಹೊಸಹುಟ್ಟು ಸಿದ್ಧಿಗೆ ಬರುತ್ತದೆ. ಆ ವಿಶ್ವಾಸಿಯು ದೀಕ್ಷಾಸ್ನಾನದಿಂದ ಬಂದು "ಹೊಸಬರಾಗಿ" ನಡೆಯುತ್ತಾನೆ ಎಂದು ಪೌಲನು ಒಂದು ಹೆಜ್ಜೆ ಮುಂದೆ ಹೋಗಿ ರೂಪಕವನ್ನು ಬಳಸಿ ಹೇಳುತ್ತಾನೆ (ರೋಮಾಪುರ 6:4). ಪೇತ್ರನು 1 ಪೇತ್ರ 1:3 ಮತ್ತು 1:23ರಲ್ಲಿನ ಆತನು ಬಳಸಿದ "ಮರುಹುಟ್ಟು" ಎಂಬ ಪದವನ್ನು ಬಳಸುವಾಗ ಆತನು ಕ್ರಿಸ್ತೀಯ ದೀಕ್ಷಾಸ್ನಾನದ ಬಗೆಗೆ ಆತನು ಸೂಚಿಸಿದನು ಎಂಬುದರಲ್ಲಿ ಯಾವ ಸಂಶಯವು ಇಲ್ಲ. ಇದೊಂದು ಹುಟ್ಟು ಆಗಿದ್ದು, "ನಾಶವಾಗುವಂಥ ಬೀಜದಿಂದ ಆಗಿದ್ದಲ್ಲ ಆದರೆ ನಾಶವಾಗದಂಥದ್ದರಿಂದ ಆಗಿದ್ದು."

ಕ್ರೈಸ್ತರು ಶೀರ್ಘ ತಂಪಿನ ಜಗತ್ತಿನಲ್ಲಿ ಜೀವಿಸುತ್ತಿದ್ದು ಇದು ಆಧುನಿಕ ಬಂಡವಾಳ ಶಾಯಿಯು ಶಕ್ತಿಯುತವಾದ ಬಲದಲ್ಲಿ ಇರುವಂಥವರು, ಮತ್ತು ಅವರು ಪರಿಶುದ್ಧರಾಗಿ ಇರುವಂಥ ಜಗತ್ತಿನಲ್ಲಿ ಇರುವವರು ಆಗಿದ್ದಾರೆ. ಪೇತ್ರನ ಓದುಗರಿಗೋಸ್ಕರ ಅಲ್ಲಿ ಕ್ರೈಸ್ತರೆಂದು

ಅವರು ತಿಳಿದಂಥ ಪರಿಶುದ್ಧ ಜೀವಿತ ಮತ್ತು ಅವಿಶ್ವಾಸದಲ್ಲಿ ಜೀವಿಸಿದ ಹಳೆಯ ಮಲೀನ ಜೀವಿತದ ಮಧ್ಯ ಮಸುಕಾದ ಮರೆಯು ಇಲ್ಲ. ಈ ವಿಷಯದಲ್ಲಿ, ಬಹುಶಃ ಅಲ್ಲಿ ಆಧುನಿಕ ಜಗತ್ತು ಮತ್ತು ಪೇತ್ರನ ಸಮಕಾಲೀನ ಜಗತ್ತಿನ ಮಧ್ಯ ಭಿನ್ನತೆಯು ಇರುವದಾಗಿದೆ. ಆಧುನಿಕ ಜಗತ್ತಿನಲ್ಲಿ ಪರಿಶುದ್ಧ ಮತ್ತು ಅಪರಿಶುದ್ಧಗಳ ಮಧ್ಯ ಗೆರೆಯು ಯಾವಾಗಲು ಮಸಕಾಗಿ ಇರುವದಾಗಿದೆ. ಜಗತ್ತು ಹೇಳುವದನ್ನು ಕೆಲವರು ಹೀಗೆ ಹೇಳಬಹುದು. "ಖಚಿತವಾಗಿ ಎಲ್ಲಾ ಮೋಜುಗಳನ್ನು ನಾವು ಬಿಟ್ಟುಬಿಡಬೇಕು ನಾವು ಹಾಗೆ ಮಾಡಬೇಕಾ? ಪರಿಶುದ್ಧತೆಯ ಅಂಶವನ್ನು ನಾವು ಅಷ್ಟು ವಿಪರಿತಕ್ಕೆ ಎಳೆಯಬಾರದು" ಎಂದು ಜಗತ್ತು ಹೇಳುವದನ್ನು ಕೆಲವರು ಹೇಳುವದುಂಟು: "ಧರ್ಮಾಂದ" ಜಗತ್ತಿನ ಎಲ್ಲಾ ಆಧುನಿಕ ಗುಣವಿಶೇಷಗಳು ತಮ್ಮನ್ನು ಗಲ್ಲಿಗೇರಿಸಬಹುದೆಂಬ ಭಯಬೀಳುವಂತಿರುವ ಕ್ರೈಸ್ತರು ಇದ್ದಾರೆ. ಅರಸನ ಮಕ್ಕಳಾಗಿ ಇರುವದರ ಬಗ್ಗೆ ಗಂಭೀರವಾಗಿ ಕೆಲವರು ಯೋಚಿಸುವವರಾಗಿದ್ದಾರೆ.

ಇದರ ದುಃಖದಲ್ಲಿ ಮತ್ತು ನಿರಾಶೆಯಲ್ಲಿ ಅನೇಕ ವಿಶ್ವಾಸಿಗಳು ತಮ್ಮ ಜಗತ್ತಿನಲ್ಲಿ ಅನ್ವಯವಾಗು ಅಸೂಕ್ಷ್ಮತೆಯ ಒಳಗೊಳ್ಳುವಿಕೆಯನ್ನು ನೋಡುವವರಾಗಿದ್ದಾರೆ. "ನೀವು ಯೆಹೋವನನ್ನು ಸೇವಿಸಲಾರಿರಿ ಆತನು ಪರಿಶುದ್ಧನು ತನಗೆ ಸಲ್ಲಬೇಕಾದ ಗೌರವವನ್ನು ಮತ್ತೊಬ್ಬರಿಗೆ ಸಲ್ಲಿಸಕೊಡದನು ... ಆಗಿದ್ದಾನೆ" ಎಂದು ಪ್ರಾಚೀನ ಇಸ್ರಾಯೇಲರಿಗೆ ಹೇಳಿದ ಯೆಹೋಶುವನ ಮಾತುಗಳು ಆಧುನಿಕ ಸಭೆಗೆ ಹೊಂದದೆ ಇರುವದು ನನಗೆ ಅಚ್ಚರಿಯಾಗುತ್ತದೆ (ಯೆಹೋಶುವ 24:19). ಪರಿಶುದ್ಧತೆ ಸವಾಲಿನಲ್ಲಿ ನಾವಿದ್ದೇವೆಯಾ? ಈ ಪ್ರಶ್ನೆಗೆ ನಾವು ಹೇಗೆ ಉತ್ತರಿಸುತ್ತೇವೆಯೋ ನನಗೆ ತಿಳಿಯದು. ಮೋಶೆಯು ಇದನ್ನು ಈ ರೀತಿಯಲ್ಲಿ ಉತ್ತರಿಸಿದನು: "ನಾನು ಈಗ ನಿಮಗೆ ಬೋಧಿಸಿದ ಧರ್ಮೋಪದೇಶವು ನಿಮಗೆ ಗ್ರಹಿಸುವದಕ್ಕೆ ಕಷ್ಟವಾದದ್ದು ಅಲ್ಲ, ಹೊಂದುವದಕ್ಕೆ ಅಸಾಧ್ಯವಾದದ್ದು ಅಲ್ಲ ... ಈ ವಾಕ್ಯವು ನಿಮಗೆ ಸಮೀಪದಲ್ಲಿಯೇ ಇದೆ. ಇದು ನಿಮ್ಮ ಬಾಯಿಯಲ್ಲಿಯೂ ಹೃದಯದಲ್ಲಿಯೂ ಇದೆ. ಇದನ್ನು ಅನುಸರಿಸುವದಕ್ಕೆ ಅವಕಾಶವುಂಟಷ್ಟೆ" (ಧರ್ಮೋಪದೇಶಕಾಂಡ 30:11, 14).

ಅಪರಿಶುದ್ಧ ಜಗತ್ತಿನಲ್ಲಿ ಪರಿಶುದ್ಧವಾಗಿರುವದಕ್ಕೆ ವಿಶ್ವಾಸಿಯು ಹೋರಾಡುತ್ತಿರುವಾಗ ಆತನು ಸಂತೈಸುವದಕ್ಕೆ ತೆಗೆದುಕೊಳ್ಳಬಹುದಾದ ಎರಡು ಅಂಶಗಳನ್ನು ಪೇತ್ರನು ಸೂಚಿಸುತ್ತಾನೆ. ಮೊದಲು, ಪರಿಶುದ್ಧತೆಯು ಪರಿಶುದ್ಧ ಪಟ್ಟಕ್ಕೆ ಪಯಣಿಸುತ್ತಿರುವ ಪ್ರಯಾಣಿಕರ ಜೊತೆಯಲ್ಲಿ ಸಹೋದರ ಸ್ನೇಹವನ್ನು ಕೊಡುವ ಮತ್ತು ಪಡೆಯುವ ಆಧಾರವನ್ನು ಕಂಡುಕೊಳ್ಳುವದಾಗಿದೆ. ಪೇತ್ರನ ಓದುಗರ ಶುದ್ಧತೆ ಮತ್ತು ವಿಧೇಯತೆಯು ಪ್ರಾಮಾಣಿಕ ಪ್ರೀತಿಯಲ್ಲಿ ಪರಿಣಾಮವನ್ನು ಹೊಂದಿದೆ, ಆದರೆ ಆತನು ಮುಂದೆ, "ಒಬ್ಬರನ್ನೊಬ್ಬರು ಹೃದಯಪೂರ್ವಕವಾಗಿಯೂ ಯಥಾರ್ಥವಾಗಿಯೂ ಪ್ರೀತಿಸಿರಿ" ಎಂದು ಪ್ರಬೋಧಿಸುತ್ತಾನೆ (1:22).

ಎರಡನೆಯದಾಗಿ, ಪರಿಶುದ್ಧತೆಯು ನಿತ್ಯವಾಗಿದೆ; ಜಗತ್ತಿನ ಗೌರವ ಮತ್ತು ಆಶೆ ಅಶಾಶ್ವತ ವಾದದ್ದು. ವಿಶ್ವಾಸಿಗಳು ನಾಶವಾಗದ ಬೀಜದಿಂದ ಜನಿಸಿದ್ದಾರೆ ಎಂದು ಪೇತ್ರನು ಹೇಳುತ್ತಾನೆ. ಮಾನವನ ಎಲ್ಲಾ ಪ್ರಭಾವಗಳು, ತನ್ನ ಜೀವಿತಕ್ಕಾಗಿ ಆತನು ಕೊಡುವ ಎಲ್ಲವುಗಳು, ಆತನ ಎಲ್ಲಾ ಸಂಪತ್ತು, ಆತನ ಎಲ್ಲಾ ಕಲಿಕೆ, ಆತನ ಎಲ್ಲಾ ಸಮಯ ಎಲ್ಲವೂ ಹುಲ್ಲಿನ ಹೂವಿನ ಹಾಗೆ ಬಿದ್ದುಹೋಗುವದು. "ಆ ಮಾತು ಯಾವುದೆಂದರೆ ನಿಮಗೆ ಸಾರಲ್ಪಟ್ಟ ಸುವಾರ್ತಾ ವಾಕ್ಯವೇ ದೇವರ ವಾಕ್ಯವು ಎಂದೆಂದಿಗೂ ಇರುವದಾಗಿದೆ" (1:25).

ದೈಹಿಕ ಮತ್ತು ಭಾವನಾತ್ಮಕ ದೂಷಣೆಯಿಂದ ಯಾವುದೇ ಪರಿಹಾರವು ಇಲ್ಲ ಎಂದು ತನ್ನ ಓದುಗರಿಗೆ ಪೇತ್ರನು ಕರೆಯನ್ನು ಕೊಡುತ್ತಾನೆ. ತದ್ವಿರುದ್ಧವಾಗಿ, ಸಂಗತಿಗಳ ಕೆಟ್ಟದ್ದಾಗಿ ಪರಿಣಮಿಸುವವು ಎಂದು ಹೇಳುತ್ತಾನೆ. ಏನೇ ಬಂದರು, ತಾವು ದೇವರ ಜನರು ಮತ್ತು ದೇವರ ಜನರು ಪರಿಶುದ್ಧರು ಎಂದು ತನ್ನ ಓದುಗರು ತಿಳಿದುಕೊಳ್ಳಬೇಕೆಂದು ಅಪೊಸ್ತಲ ಬಯಸುವವನಾಗಿದ್ದಾನೆ. ಕರ್ತನ ಹೆಸರನ್ನು ಹೊಂದಿದವರಿಗೆ ಇಪ್ಪತ್ತೊಂದನೆಯ ಶತಮಾನದ ಪರಿಶುದ್ಧ ಜೀವಿತಕ್ಕಿಂತ ಯಾವುದೇ ದೊಡ್ಡ ಅವಶ್ಯಕತೆಯು ಇಲ್ಲ. ಯಾವುದೇ

ರಾಜಿಯಲ್ಲಿ ಮತ್ತು ನೆವಕ್ಕೆ ಅಲ್ಲಿ ಸ್ಥಳವು ಇಲ್ಲ. ಪರಿಣಾಮದಂತೆ, ಇಂದಿನ ಪಾಪವು ತನ್ನ ಕೈಯಲ್ಲಿ ನಮ್ಮನ್ನು ಅಪ್ಪಿಕೊಳ್ಳುವದು ಮತ್ತು ಎಷ್ಟಾದರೂ ನಾವು ಮನುಷ್ಯರು ಎಂದು ನಮಗೆ ಹೇಳುವದು. ನಾವು ನಮ್ಮಿಂದ ಹೆಚ್ಚಾದದ್ದನ್ನು ಅಪೇಕ್ಷಿಸಬಾರದು. ಒಂದು ಪರಿಣಾಮದಂತೆ ಕ್ರೈಸ್ತರು ಪರಿಶುದ್ಧತೆಯನ್ನು ಯಾವಾಗಲೂ ಜೀವಿತ ಒಂದು ಆಯ್ಕೆಯಂತೆ ಮಾಡಿಕೊಳ್ಳಬಾರದು. ದೇವರು ನಮ್ಮನ್ನು ಪರಿಶುದ್ಧರನ್ನಾಗಿಸಲು ವಿಮೋಚಿಸಿದನು ಎಂದು ಆಲೋಚನೆಯನ್ನು ಅರಿತುಕೊಳ್ಳುವದಾಗಿದೆ.

**ವಿಮೋಚಿಸಲ್ಪಟ್ಟದ್ದು, ನಾಶವಾಗುವ ಸಂಗತಿಯಿಂದಲ್ಲ (1:18, 19)**

ನಮ್ಮ ಸಮಕಾಲೀನ ಜಗತ್ತಿನ ಅನೇಕ ಸಂಗತಿಗಳು ಊಹಿಸಿಕೊಳ್ಳಲು ನಿಪುಣರು, ಆಧುನಿಕವು ಮತ್ತು ಧೈರ್ಯವುಳ್ಳವುಗಳು ಅದೇ ಅಲಕ್ಷತೆಯ ವಿಸ್ತರಿಸುವಿಕೆಯು ಆಗಿದ್ದ ಅದು ಜೀವಿತವನ್ನು ಜಜ್ಜುವಂತದ್ದು ಮತ್ತು ಸಂತೋಷವನ್ನು ಸಾವಿರ ವರ್ಷಗಳವರೆಗೆ ಸೋಸಿ ಬಿಡುವದು ಆಗಿದೆ. ನಿರ್ಲಕ್ಷದ ಮುಂದಿನ ಆಶೆಯನ್ನು ಅಡಿಯಾಳನ್ನಾಗಿ ಮಾಡುತ್ತದೆ ಮತ್ತು ನಾಶಮಾಡುತ್ತದೆ. ಆತನ ಎರಡನೆಯ ಪತ್ರದಲ್ಲಿ, ಪೇತ್ರನು ಅವರು ಭ್ರಷ್ಟಾಚಾರದ ದಾಸರಾದಾಗ ವಾಗ್ದತ್ತ ಸ್ವಾತಂತ್ರ್ಯದ ಬಗ್ಗೆ ಪೇತ್ರನು ಹೀಗೆ ಬರೆಯುತ್ತಾನೆ: "... ಒಬ್ಬನು ಯಾವನು ಯಾವುದಕ್ಕೆ ಸೋತುಹೋಗಿರುವನೋ ಅದರ ದಾಸತ್ವದೊಳಗಿರುವನಷ್ಟೆ" (2 ಪೇತ್ರ 2:19).

1 ಪೇತ್ರದಲ್ಲಿ ದಾಸರಾಗಿರುವದು, ಅವರು ಬಲ್ಲಂತ ಹಿಂದಿನ ಜೀವಿತ ದುರ್ಬಲತೆ ಮತ್ತು ಕ್ರಿಸ್ತನಲ್ಲಿ ಅವರು ಆನಂದಿಸಿದ ಸ್ವಾತಂತ್ರ್ಯತೆ ಇವುಗಳ ಮಧ್ಯದ ಸೂಕ್ಷ್ಮವಾದ ವ್ಯತ್ಯಾಸವನ್ನು ಅಪೊಸ್ತಲನು ಚಿತ್ರಿಸಿದ್ದಾನೆ. ತನ್ನ ಓದುಗರು ವಿಮೋಚಿಸಲ್ಪಟ್ಟಿದ್ದಾರೆ ಎಂದು ಪೇತ್ರನು ಅವರಿಗೆ ನೆನಪಿಸುತ್ತಾನೆ. "ವಿಮೋಚಿಸು" ಎಂದು ಭಾಷಾಂತರವಾದ ಪದವು ಈಡು ಕೊಡುವದಕ್ಕೋಸ್ಕರ ಗ್ರೀಕ್ ಜಗತ್ತಿನಲ್ಲಿ ಆತ್ಮೀಕವಲ್ಲದ ಲೇಖಕರಿಂದ ಬಳಸಲ್ಪಟ್ಟಿದೆ. ಶ್ರೀಮಂತ ಅಥವಾ ಅಧಿಕಾರಯುತವಾದ ಮನುಷ್ಯನು ಕಡಲ್ಗಳ್ಳರ ಜೊತೆಯಿಂದ ಅಥವಾ ಡಕಾಯಿತರ ಸಂಗಡದಿಂದ ಹಣಕ್ಕಾಗಿ ಆಜ್ಞಾಪಿಸಲ್ಪಡಬಲ್ಲನು. ರೋಮನ್ ಇತಿಹಾಸಕಾರನಾದ Suetoniusನಿಗೆ ಸಂಬಂಧಿತವಾದ ಒಂದು ಘಟನೆಯು ಕ್ರಿ.ಪೂ. 74ರಲ್ಲಿ ಜೂಲಿಯಸ್ ಸೀಜರನ ಜೀವಿತದಲ್ಲಿ ಇದದ್ದು ಆಗಿದೆ. ಆತನು Rhodes ದ್ವಿಪಕ್ಕೆ ಸಾಹಿತ್ಯ ಶಾಸ್ತ್ರವನ್ನು ಅಭ್ಯಾಸಿಸಲಿಕ್ಕೆ ಹೋದಾಗ ಇದು ಸಂಭವಿಸಿದ್ದು ಆಗಿದೆ. ಮಾರ್ಗದಲ್ಲಿ ಆತನ ಹಡಗು ಕಡಲ್ಗಳ್ಳರ ಕೈಗೆ ಸಿಕ್ಕಿತು. ಯುವ ಸೀಜರ್ Miletus ಪಟ್ಟಣಕ್ಕೆ ತನ್ನ ಈಡುಕೊಡುವದಕ್ಕಾಗಿ ಐವತ್ತು ತಲಾಂತು ಬಂಗಾರವನ್ನು ಪಡೆದುಕೊಳ್ಳುವದಕ್ಕಾಗಿ ಕಳಿಸಲ್ಪಟ್ಟನು. Miletus ಅದನ್ನು ಸಂದಾಯ ಮಾಡಿತು, ಮತ್ತು ಕಡಲ್ಗಳ್ಳರು ಸೀಜರನನ್ನು ಬಿಡುಗಡೆ ಮಾಡಿದರು.

ಶ್ರೀಮಂತ ಮತ್ತು ಅಧಿಕಾರಯುತ ವಿಮೋಚನೆಯ ಹಣದ ಸಂದಾಯವು ಬೆಳ್ಳಿ ಮತ್ತು ಬಂಗಾರಗಳಲ್ಲಿ ಇರುವದಾಗಿದೆ, ಆದರೆ ಪೇತ್ರನ ಓದುಗರ ವಿಮೋಚನೆಯ ಹಣವು ಅದಕ್ಕಿಂತಲೂ ಅಮೂಲ್ಯವಾದದ್ದರಿಂದ ಕೊಂಡುಕೊಳ್ಳಲ್ಪಟ್ಟಿವೆ ಎಂದು ಅವರಿಗೆ ನೆನಪಿಸುತ್ತಾನೆ. ವಿಮೋಚನೆಯ ಬೆಲೆಯು ಅವರನ್ನು ದೇಹದ ಇಚ್ಛೆಗಳ ದಾಸತ್ವದಿಂದ ಹೊರತಂದಿರುವದು ದೇವಕುಮಾರನ ಅಮೂಲ್ಯವಾದ ರಕ್ತದಿಂದಲ್ಲದೇ ಮತ್ತೇನಿಲ್ಲ (1 ಪೇತ್ರ 1:18, 19). ಪೌಲನು ಇದನ್ನು 2 ಕೊರಿಂಥ 5:21ರಲ್ಲಿ ಈ ರೀತಿಯಲ್ಲಿ ಪರಿಚ್ಛೇದಿಸಿದ್ದಾನೆ. "ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗ ಮಾಡಿದನು."

---

ಟಿಪ್ಪಣಿಗಳು

[1]“ಇರು” ಅಥವಾ “ಇದೆ” 1 ಪೇತ್ರ 1:3 ಮತ್ತು ಮತ್ತಾಯ 21:9 ಎರಡರಲ್ಲು ಇರುವದಾಗಿದೆ. ಪೇತ್ರನು *eulogētos.* ಇದನ್ನು ವಿಶೇಷಣವಾಗಿ ಬಳಸಿದಾಗ *eulogēmenos* ಕೃದಂತವು ವಾಚನಾತ್ಮಕ ವಿಶೇಷಣವಾಗಿದೆ. ಘೋಷಣೆಯ ಮಧ್ಯದ “ಆಶೀರ್ವಾದ ಹೊಂದಿದವರು” ಮತ್ತು ಕೃದಂತವಾದ “ಆಶಿರ್ವಾದಿತರು” ಅಲ್ಪವಾದದ್ದು ಆಗಿದೆ. [2]ರಬ್ಬಿಗಳ ಕೆಲಸಾರಿ ಮತಾಂತರಿಗಳನ್ನು ನವಜಾತ ಶಿಶುವಿಗೆ ಹೋಲಿಸುತ್ತಿದ್ದು, ಅವರು ಕೇವಲ ಹೊಸ ಒಡಂಬಡಿಕೆಯಲ್ಲಿ ಹೊಸ ಹುಟ್ಟಿನ ಬಾಧ್ಯತೆಯ ಆಧಾರದ ಬಗೆಗೆ ಕ್ರಾಂತಿಕಾರಕವಾದ ನೈತಿಕ ಮತ್ತು ಆತ್ಮೀಕ ಹೊಸ ತನವನ್ನು ಊಹಿಸುವವರಾಗಿದ್ದರು. ಸಾಕ್ಷಿಯನ್ನು ಪರಿಗಣಿಸುವಾಗ G. R. Beasley-Murray ಹೀಗೆ ಸಮರೋಪಿಸುತ್ತಾರೆ. ಕ್ರೈಸ್ತತ್ವದ ಉದಯಕ್ಕೆ ಮುನ್ನ ವ್ಯಕ್ತಿಯ ಆತ್ಮೀಕ ಜೀವಿತದ ಹೊಸ ಹುಟ್ಟಿನ ಪರಿಕಲ್ಪನೆಯ ಅನ್ವಯವು ಜೂದಾಯಿಸ್‌ಗಳಿಗೆ ಮತ್ತು Hellenistic syncretism ಜಗತ್ತಿಗೆ ಅಸಜವಾದದ್ದು ಆಗಿದೆ. (G. R. Beasley-Murray, *Baptism in the New Testament* [Grand Rapids, Mich.: Wm. B. Eerdmans Publishing Co., 1962], 227.) [3]Ibid., 228. [4]“ವಿಶ್ವಾಸಿಗಳು ದೇವರ ಮಕ್ಕಳಾಗಿದ್ದಾರೆಯೇ ಹೊರತು ದತ್ತುಸ್ವೀಕಾರಕ್ಕಿಂತಲು ಹೊಸ ಹುಟ್ಟಿಗಿಂತಲು ಹೆಚ್ಚಾಗಿದದ್ದು ಆಗಿದೆ (ರೋಮಾಪುರ 8:15) ಎಂದು ಪೌಲನು ಗ್ರಹಿಸಿದ್ದಾನೆ” ಎಂದು George Eldon Ladd ರವರು ತಾವು ಬರೆಯುವಾಗ ಭಾಗೀಯವಾಗಿ ಸರಿಮಾಡಿದ್ದಾರೆ. (George Eldon Ladd, *A Theology of the New Testament,* 2d ed. [Grand Rapids, Mich.: Wm. B. Eerdmans Publishing Co., 1993], 664.) ಪೌಲನು ದತ್ತು ತೆಗೆದುಕೊಳ್ಳುವಿಕೆ ಮತ್ತು ಹೊಸಹುಟ್ಟಿಗೆ ಉಪಮೆಯನ್ನು ಬಳಸಿದ್ದು, ತೀತ 3:5ರಲ್ಲಿರುವಂತೆ ಸ್ಪಷ್ಟವಾಗಿಸುವದಾಗಿದೆ. ರೋಮಾಪುರ 8:15, 16ರಲ್ಲಿನ ದತ್ತು ತೆಗೆದುಕೊಳ್ಳುವಿಕೆಯನ್ನು ಉಪಮೆಯನ್ನು ಬಳಸುತ್ತ ಪೌಲನು ವಿಶ್ವಾಸಿಗಳಿಗೆ ಭರವಸೆಯನ್ನು ಕೊಡುತ್ತಾ ಕ್ರಿಸ್ತನ ಮೂಲಕ ದೇವರೊಡಗಿನ ಅವರ ಸಂಬಂಧವನ್ನು ಗಟ್ಟಿಯಾಗಿಸಿದ್ದಾನೆ. ರೋಮಾಪುರ 6:1-4 ಮತ್ತು ತೀತ 3:5 ಎರಡರಲ್ಲಿ ಒಬ್ಬನು ಕ್ರೈಸ್ತನಾದಾಗ ಅವನ ಬಗ್ಗೆಯ ವಿಷಯವು ಕ್ರಾಂತಿಕಾರ ಬದಲಾವಣೆಯನ್ನು ತರುವದಾಗಿದೆ. ಒಂದೆಡೆಯಲ್ಲಿ, ಸಾಯುತ್ತಿರುವ ವೃದ್ಧ ಮತ್ತು ಇನ್ನೊಂದೆಡೆಯಲ್ಲಿ ಇದರ ಅರ್ಥ ಹೊಸದಾಗಿ ಹುಟ್ಟುವದು ಎಂದು ಇದು ಅರ್ಥವನ್ನು ಕೊಡುವದಾಗಿದೆ. [5]J. N. D. Kelly, *A Commentary on the Epistles of Peter and of Jude,* Black's New Testament Commentaries (London: Adam & Charles Black, 1969), 46. [6]David Ewert, *And Then Comes the End* (Scottsdale, Pa.: Herald Press, 1980), 173. [7]F. J. A. Hort, *The First Epistle of St. Peter I.1—II.17: The Greek Text with Introductory Lecture, Commentary, and Additional Notes* (New York: Macmillan Co., 1898), 38. [8]Kelly, 46. [9]ನೋಡಿರಿ J. Ramsey Michaels, *1 Peter,* Word Biblical Commentary*,* vol. 49 (Waco, Tex.: Word Books, 1988), 29. [10]ಸರಕಾರದ ವಿಷಯವಾಗಿನ ಪೇತ್ರನ ಬೋಧನೆಯು ಹೊಸ ಒಡಂಬಡಿಕೆಯ ಮನೆವಾರ್ತೆಯ ನಿಬಂಧನೆಯು ವಜಾಮಾಡದಿರುವದಾಗಿದೆ. ಎಫೆಸ 5; 6ರಲ್ಲಿ ಮತ್ತು ಕೊಲಸ್ಸೆ 3; 4ರಲ್ಲಿ ಸಿಕ್ಕುವ ನಿಬಂಧನೆಯಲ್ಲಿ ಸರಕಾರದ ಬಗ್ಗೆ ಯಾವುದೇ ಆಧಾರವಿಲ್ಲ. ಮನೆವಾರ್ತೆಯ ನಿಬಂಧನೆಯಲ್ಲಿ ಸರಕಾರದ ಬಗೆಗೆ ಯಾವುದೇ ಆಧಾರಗಳು ಇಲ್ಲ. ಮನೆವಾರ್ತೆಯು ಅಕ್ಷರಸಹ ನಿಬಂಧನೆಯ ರೀತಿ ಯನ್ನು ತೆಗೆದುಕೊಂಡಿದ್ದು ಅದು ಆತನ ಓದುಗರ ಅವಶ್ಯಕತೆಯನ್ನು ಮತ್ತು ಕಾಳಜಿಯನ್ನು ಪೂರೈ ಸುವುದಾಗಿದೆ.

[11]Kelly, 46. [12]John Stott, *The Contemporary Christian* (Leicester, U.K.: Inter-Varsity Press, 1992), 157. [13]ಕೃದವಾಚಕವು ಅತ್ಯಗತ್ಯವಾದ ಸರಣಿಯಾಗಿದ್ದು ವಿಶೇಷವಾಗಿ ಅಗತ್ಯದ ಗುಣವನ್ನು ಬಳಸುವದು ಆಗಿದೆ. [14]Edward Gordon Selwyn, *The First Epistle of St. Peter: The Greek Text, with Introduction, Notes, and Essays,* Thornapple Commentaries, 2d ed. (London: Macmillian & Co., 1947; reprint, Grand Rapids, Mich.: Baker Book House, 1981), 131. [15]Ibid, 260. ನೋಡಿರಿ See also Duane Warden, 1 ಪೇತ್ರ 1:10-12 ಪ್ರವಾದಿಗಳು *Restoration Quarterly* 31 (First Quarter 1989): 1–12. ಈ ಪರಿಚ್ಛೇದದಲ್ಲಿನ ಪ್ರವಾದಿಗಳನ್ನು ಸೂಚಿಸಬೇಕಾದರೆ ಅನೇಕ ವ್ಯಾಖ್ಯಾನಕಾರರು Selwyn ರನ್ನು ಆಧಾರಿಸುತ್ತಾರೆ, ಆತನನ್ನು ಕೇವಲ ಅಲ್ಲಗಳೆ ಯವರಾಗಿದ್ದರೂ ಕೂಡಾ ಆಧರಿಸುವವರಾಗಿದ್ದಾರೆ. ಈ ಪ್ರಶ್ನೆಯನ್ನು ತೆರೆಯಲು ಅವರು ಯಶಸ್ವಿಯಾಗಲಿ ಅಥವಾ ಇಲ್ಲದಿರಲಿ. *Eis humas* in 1:10. (Michaels, 44) ಮಂಡಿಸುವದರ ಮೂಲಕ ಮಿಕಾಯೇಲನು ಸಮಸ್ಯೆಯು ಪರಿಹಾರವಾಗಿಲ್ಲ ಎಂದು ಕಂಡುಕೊಂಡನು. 1:10ರಲ್ಲಿ ಕೃಪೆಯು 1:11ರಲ್ಲಿ ಕ್ರಿಸ್ತನಿಗೋಸ್ಕರ ಸಂಕಟಪಡುತ್ತಿರುವದಕ್ಕಾಗಿ ಇರುವದಾಗಿದೆ. [16]ಹೊಸ

ಒಡಂಬಡಿಕೆಯ ಪ್ರವಾದಿಗಳು ಸಭೆಯಲ್ಲಿಯೇ ಇರುವ ಸದಸ್ಯರಾಗಿದ್ದರೇ (1 ಕೊರಿಂಥ 12ರಲ್ಲಿ ಸೂಚಿಸಿದಂತೆ) ಅಥವಾ ಅಲೆಮಾರಿಗಳು (ಯೋಹಾನನ ಪತ್ರಿಕೆಯಲ್ಲಿ ಮತ್ತು *Didache* ಯಲ್ಲಿ ಸೂಚಿಸಿದಂತೆ) ಆಗಿದ್ದರೂ ಎಂಬ ಪ್ರಶ್ನೆಯಲ್ಲಿ ದೊಡ್ಡ ಪ್ರೌಢವಾದ ಕಾರ್ಯವು ನಡೆಯಿತು. ಹೆಚ್ಚಿನ ಅಭ್ಯಾಸಕ್ಕಾಗಿ David Hill, *New Testament Prophecy* (Atlanta: John Knox Press, 1979), 104–9. [17]Kelly, 59. [18]ಒಲವು ಮತ್ತು ಒಪ್ಪಿಕೊಳ್ಳುವಿಕೆಗಳು ಅನ್ಯಜನರನ್ನು ಒಡಂಬಡಿಕೆಯ ಅಡಿಯಲ್ಲಿ ಬರುವದಕ್ಕೆ ಅವರ ವಿಶೇಷವಾಗಿ ಒಲುಮೆಯಾಗಿದೆ ಎಂದು ಹೋರ್ಟನು ಬರೆಯುತ್ತಾನೆ (Hort, 49.) [19]For a contrary view see Wayne A. Grudem, *The First Epistle of Peter: An Introduction and Commentary,* Tyndale New Testament Commentaries, vol. 17 (Grand Rapids, Mich.: Wm. B. Eerdmans Publishing Co., 1988), 69–71. Grudem'sರ ಪಲಿಚ್ಛೇದದ ವ್ಯಾಕರಣದ ನಿರ್ವಹಣೆಯು ಓದುವದಕ್ಕೆ ಕಷ್ಟಕರವಾದದ್ದು ಆಗಿದೆ. ಆತನ ಪ್ರಶ್ನೆಗಳ ಕೊರತೆಯುಕ್ತ ನಿಭಾಯಿಸುವಿಕೆ ಸೆಲ್ವಿನ್‌ನು ಪರಿಚ್ಛೇದವನ್ನು ಸರಿಯಾಗಿದೆ ಎಂದು ಅರಿತುಕೊಂಡಿದ್ದಾನೆ ಎಂದು ವಾದನ್ನು ಪುಷ್ಟೀಕರಿಸುವದಾಗಿದೆ. [20]Albert Camus ನಂತರ ಲೇಖಕರ ಕುರಿತು ಆಕರ್ಷಕಯುತವಾದ ಸಂಗತಿಯೆಂದರೆ ದೇವರಲ್ಲಿ ನಂಬಿಕೆಯಿಲ್ಲದಿರುವಿಕೆಯ ಕುರಿತು ಇರುವ ಆಶೆಗೆ ಮನ್ನಣೆ ಕೊಡುವುದೇ ಆಗಿದೆ. "ಒಬ್ಬ ಯೋಗ್ಯನಾದ ಮನುಷ್ಯನ ನಗುವಂತೆ ಮಾಡಲು "ಸಾರ್ವತ್ರಿಕ ಕಾರಣ, ಪ್ರಾಯೋಗಿಕ ಅಥವಾ ನೈತಿಕತೆ, ಆ ದೃಢನಿರ್ಧಾರತೆ, ಈ ಅಂಶಗಳು ಪ್ರತಿಯೊಂದನ್ನು ವಿವರಿಸಲು ಸಾಕಷ್ಟಾಗುತ್ತದೆ ಎಂದು Albert Camus ನಂಥ ಲೇಖಕನು ತನ್ನ *The Myth of Sisyphus* ಎಂಬಲ್ಲಿ ಹೇಳುತ್ತಾನೆ (Albert Camus, *The Myth of Sisyphus, and Other Essays,* trans. Justin O'Brien [New York: Vintage Books, 1955], 16.) ಒಬ್ಬ ಸಹಜವಾದ hedonist, ಅವಿಶ್ವಾಸಿಯಂತೆ, Camusನು ಧೈರ್ಯದಿಂದ ನೇರವಾಗಿ ಮುಖವನ್ನು ನೋಡಿದನು ಮತ್ತು ದೇವರನ್ನು ನಿರಾಕರಿಸಿದನು. ಮಾನವ ಜೀವಿತವು ಅರ್ಥಹೀನತೆಯಿಂದ ನಿರಾಶೆ ಮತ್ತು ನಿರೀಕ್ಷೆ ಇಲ್ಲದವುಗಳಿಂದ ತುಂಬಿದ್ದು ಎಂದು ಕಂಡುಕೊಂಡನು.

[21]In addition, the context suggests that the Greek participles "preparing your minds" (1:13) and "not being conformed" (1:14) are used with the force of imperatives. [22]2 ಸಮುವೇಲ 7:10ರಲ್ಲಿ ಕಂಡು ಬರುವಂಥ ನಾಣ್ಣುಡಿಯ ಇಬ್ರಿಯದಲ್ಲಿನ "ದುಷ್ಟರು" ಎಂಬುದು ಇಂಗ್ಲೀಷ್ ಭಾಷಾಂತರದಲ್ಲಿ "ಕೆಟ್ಟವರು" ಎಂದು ಭಾಷಾಂತರವಾಗಿದೆ (ಹೋಲಿಸಿ ಮತ್ತಾಯ 8:12, "ರಾಜ್ಯದ ಬಾಧ್ಯಸ್ಥರು" ಮತ್ತು ಎಫೆಸ 2:3ರಲ್ಲಿ "ದೇವರ ಕೋಪಕ್ಕೆ ಗುರಿಯಾದವರು.") [23]*Suschēmatizomenoi* ಎಂಬಂಥ ಭಾಗವು ತಾಂತ್ರಿಕವಾಗಿ ಕೃದಂತವಾಗಿದೆ ಆದರೆ ಇಲ್ಲಿ ವಿದ್ಯಾರ್ಥಕದೊಡನೆ ಬಳಕೆಯಾಗುವದಾಗಿದೆ. [24]Michaels, 51. [25]Grudem, 79. [26]Ibid, 80. [27]Ladd, 564. [28]Ernest Best, *1 Peter*, The New Century Bible Commentary (Grand Rapids, Mich.: Wm. B. Eerdmans Publishing Co., 1971), 87. [29]John H. Elliott, *Home for the Homeless: A Sociological Exegesis of 1 Peter, Its Situation and Strategy* (Philadelphia: Fortress Press, 1973), 42. [30]ಪೇತ್ರನು ಬಳಸಿದ ವಿಮೋಚನೆ ಎಂಬ ಆಧಾರವು ಆಗಿದ್ದು ಈಡುಕೊಡುವದು ಅಲ್ಲ. (Best, 89.)

[31]Lutroomai ಪದವು "ಕುಟುಂಬ" ಆಗಿದ್ದು ಹಳೆಯ ಒಡಂಬಡಿಕೆ ಮತ್ತು ವಿಗ್ರಹಾರಾಧನೆಯ ಜಗತ್ತು ಎರಡರಲ್ಲೂ ಚರ್ಚೆಯ ಮೂಲಕ ಆಗಿದ್ದು Francis Wright Beare ಕರೆಕೊಟ್ಟಿದ್ದಾರೆ. (Francis Wright Beare, *The First Epistle of Peter: The Greek Text with Introduction and Notes,* 3d ed. [Oxford: Basil Blackwell, 1970], 103–5.) [32]NASB ಯು ಹೊಸ ಒಡಂಬಡಿಕೆಯಲ್ಲಿ ಪ್ರಾಯಶ್ಚಿತ ಎಂಬ ಪದವನ್ನು ಬಳಸಿಲ್ಲ. KJVಯಲ್ಲಿ ರೋಮಾಪುರ 5:11ರಲ್ಲಿ ಒಂದು ಸಾರಿ ಬಳಸಲ್ಪಟ್ಟಿದೆ. NRSVಯು ರೋಮಾಪುರ 3:25; ಇಬ್ರಿಯ 2:17ರಲ್ಲಿ ಪದಗಳನ್ನು ಬಳಸಿದೆ. NIVಯು ಹೊಸ ಒಡಂಬಡಿಕೆಯಲ್ಲಿ ಪ್ರಾಯಶ್ಚಿತ ಎಂಬ ಪದವನ್ನು ಬಳಸಿಲ್ಲ. KJVಯಲ್ಲಿ ರೋಮಾಪುರ 5:11ರಲ್ಲಿ ಒಂದು ಸಾರಿ ಬಳಸಲ್ಪಟ್ಟದೆ. NRSVಯು ರೋಮಾಪುರ 3:25; ಇಬ್ರಿಯ 2:17ರಲ್ಲಿ ಪದಗಳನ್ನು ಬಳಸಿದೆ. NIVಯು ರೋಮಾಪುರ 3:25; ಇಬ್ರಿಯ 2:17; 9:5ರಲ್ಲಿ ಹೊಂದಿದೆ. [33]Michaels, 66–67. [34]Robert H. Gundry, " 'Verba Christi' in 1 Peter; Their Implications Concerning the Authorship of 1 Peter and the Authenticity of the Gospel Tradition," *New Testament Studies* 13 (July 1967): 339–40. [35]Raymond C. Kelcy, *The Letters of Peter and Jude,* The Living Word Commentary, vol. 17 (Austin, Tex.: R. B. Sweet Co., 1972), 38. [36]Kelly, 78. [37]NASBಯು ಅಪೊಸ್ತಲರ ಕೃತ್ಯಗಳು 2:40ನ್ನು ಭೂತಕಾಲದ ಕರ್ಮಣಿ

ರೂಪದ ಕೃದಂತವಾಗಿ ಅಕ್ಷರಸಹ ಭಾಷಾಂತರಿಸಿದ್ದು ಅದು "ವಕ್ರ ಬುದ್ಧಿಯುಳ್ಳ ಈ ಸಂತತಿಯವರಿಂದ ತಪ್ಪಿಸಿಕೊಳ್ಳಿರಿ" ಎಂದಿದೆ. "ಕೇಳುಗನು ನಿಷ್ಕ್ರಿಯೆಯುಳ್ಳವನಾಗಿರುವಾಗ ಮಾಡಬೇಕಾದ ಕೆಲಸವನ್ನು ಅರ್ಥಗರ್ಭಿತವಾಗಿ ಒಬ್ಬನು ಆಜ್ಞೆಮಾಡುವದು ಹೇಗೆ?" ಎಂಬುದು ಇಲ್ಲಿನ ಪ್ರಶ್ನೆಯಾಗಿದೆ, "ಕೇಳಲ್ಪಡಲಿ" "ಪಡೆದುಕೊಳ್ಳಲ್ಪಡಲಿ" ಮತ್ತು ಇಂಥವುಗಳು ಅತ್ಯಗತ್ಯವಾದ ಬಲವಾಗಿದ್ದು "ನಿನ್ನಿಂದ ಕೇಳಿಸಲ್ಪಡಲಿ," ಅಥವಾ "ನಿಮ್ಮಿಂದ ಸ್ವೀಕರಿಸಲ್ಪಡಲಿ" ಎಂದಾಗಿದೆ. ಅದು ಅಪೊಸ್ತಲರ ಕೃತ್ಯಗಳು 2:40ರಲ್ಲಿನ ಪೇತ್ರನ ಅರ್ಥವಾಗಿದೆ. ತನ್ನ ಕೇಳುಗರು ತಮಗೆ ತಾವೇ ರಕ್ಷಣೆ ಹೊಂದಲು ಅವಕಾಶಕೊಡಬೇಕೆಂದು ಆತನ ಮಾತಿನ ಅರ್ಥವಾಗಿದೆ. ಇದು ಹೀಗಿರುವಾಗ ಅವರ ಸ್ವಂತದ ನಿರ್ಧಾರದಿಂದ ಮಾಡುವಂಥದ್ದನ್ನು ಮಾಡಲು ಪೇತ್ರನು ಇಲ್ಲಿ ಹೇಳುತ್ತಿದ್ದಾನೆ. ಈ ರೀತಿಯಲ್ಲಿ ಇರುವಾಗ ಪೇತ್ರನ ಕೇಳುಗರು "ತಮಗೆ ತಾವೇ ರಕ್ಷಿಸಲ್ಪಡಬೇಕು" ಎಂಬುದು ಇದರ ಅರ್ಥವಾಗಿದೆ. [38]Michaels, 75.